**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ: ನೂತನ ಕೈಗಾರಿಕಾ ನೀತಿ : 2006-2011**

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಸಿ.ಐ./30/ಎಸ್.ಪಿ.ಸಿ./96, ದಿನಾಂಕ: 15.03.1996
2. ಸರ್ಕಾರಿ ಆದೇಶ ಸಂಖ್ಯೆ: ಸಿ.ಐ./30/ಎಸ್.ಪಿ.ಸಿ./96, ದಿನಾಂಕ: 31.05.1996
3. ಸರ್ಕಾರಿ ಆದೇಶ ಸಂಖ್ಯೆ: ಸಿ.ಐ./30/ಎಸ್.ಪಿ.ಸಿ./96, ದಿನಾಂಕ: 14.05.1999
4. ಸರ್ಕಾರಿ ಆದೇಶ ಸಂಖ್ಯೆ: ಸಿ.ಐ./30/ಎಸ್.ಪಿ.ಸಿ./96, ದಿನಾಂಕ: 15.05.1999
5. ಸರ್ಕಾರಿ ಆದೇಶ ಸಂಖ್ಯೆ: ಸಿ.ಐ./167/ಎಸ್.ಪಿ.ಐ/2001, ದಿನಾಂಕ: 30.06.2001

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಉಲ್ಲೇಖಿಸಿದ ಸರ್ಕಾರಿ ಆದೇಶ ದಿ. 15.03.1996 ರ ಅನ್ವಯ, ರಾಜ್ಯ ಸರ್ಕಾರವು ಸಮಗ್ರ ಕೈಗಾರಿಕಾ ನೀತಿ – 1996 ರನ್ನು ಪ್ರಕಟಿಸಿತ್ತು. ಈ ನೀತಿಯು ಹೊಸ ಬಂಡವಾಳ ಹೂಡಿಕೆದಾರರಿಗೆ ಉತ್ತೇಜನ ಮತ್ತು ರಿಯಾಯಿತಿಗಳನ್ನು ನೀಡಿತ್ತು. ಈ ನೀತಿಯು ಮೇಲೆ ನಮೂದಿಸಿದ ಕ್ರಮ ಸಂಖ್ಯೆ (2)ರಿಂದ (4)ರಲ್ಲಿ ಅನುಕ್ರಮವಾಗಿ ಉಲ್ಲೇಖಿಸಿದ ಸರ್ಕಾರಿ ಆದೇಶ ದಿ. 31.05.1996, 14.05.1999 ಮತ್ತು 15.05.1999 ರ ಪ್ರಕಾರ ಕಾಲಕಾಲಕ್ಕೆ ಮಾರ್ಪಾಡಾಗಿದೆ.

ಭಾರತ ಸರ್ಕಾರವು ರೂಪಿಸಿದ ಉದಾರ ಆರ್ಥಿಕ ನೀತಿಯು ಖಾಸಗಿ ಕ್ಷೇತ್ರದಲ್ಲಿ ತೀವ್ರ ಕೈಗಾರಿಕಾ ಬೆಳವಣಿಗೆಗೆ ಹೆಚ್ಚಿನ ಕೊಡುಗೆ ನೀಡಿದೆಯಲ್ಲದೆ ಇದರಿಂದ ವಿದೇಶಗಳಿಂದ ಫಾರಿನ್ ಡೈರೆಕ್ಟ್ ಇನ್‌ವೆಸ್ಟ್‌ಮೆಂಟ್ ಮೂಲಕ ಗಣನೀಯ ಬಂಡವಾಳದ ಹರಿವು ಕೂಡಾ ಸಾಧ್ಯವಾಗಿದೆ.

ಕರ್ನಾಟಕವು ಕೈಗಾರಿಕೆಯಲ್ಲಿ ಮುಂಚೂಣಿಯಲ್ಲಿದೆ. ಕಳೆದ ಕೆಲವಾರು ವರ್ಷಗಳಿಂದ ರಾಜ್ಯವು, ರಾಜ್ಯದ ಆರ್ಥಿಕ ಮತ್ತು ಕೈಗಾರಿಕಾ ಕ್ಷೇತ್ರದ ಅಗತ್ಯತೆ ಯನ್ನು ಪೂರೈಸಲು ಪ್ರಗತಿಪರ ಕೈಗಾರಿಕಾ ನೀತಿಗಳನ್ನು ಪ್ರಕಟಿಸುತ್ತಾ ಬಂದಿದೆ. ಕಳೆದ 100 ವರ್ಷಗಳಿಂದ ರಾಜ್ಯವು ಸಾರ್ವಜನಿಕ ವಲಯದ ಬೃಹತ್ ಕೈಗಾರಿಕೆಗಳ ಹಾಗೂ ಖಾಸಗಿ ಕ್ಷೇತ್ರದ ಬೃಹತ್ ಮತ್ತು ಮಧ್ಯಮ ಉದ್ಯಮಗಳ ಮತ್ತು ವ್ಯಾಪಕವಾಗಿ ಪ್ರಸರಿಸಿರುವ ಸಣ್ಣ ಕೈಗಾರಿಕೆಗಳ ಸಂಯುಕ್ತ ಬಲದೊಂದಿಗೆ ಸದೃಢ ಮತ್ತು ಪ್ರಭಾವಪೂರ್ಣ ಕೈಗಾರಿಕಾ ತಳಹದಿಯನ್ನು ನಿರ್ಮಿಸಿರುವ ಕೀರ್ತಿಗೆ ಪಾತ್ರವಾಗಿದೆ. ರಾಜ್ಯವು ವ್ಯಾಪಕವಾದ ವಿವಿಧ ಕೈಗಾರಿಕಾ ಕ್ಷೇತ್ರಗಳಲ್ಲಿ ತನ್ನ ಶಕ್ತಿಯನ್ನು ಪ್ರದರ್ಶಿಸಿದ್ದು, ಹಳೆ ಇಕಾನಮಿಯಲ್ಲಿ ಕೂಡಾ ಯಶಸ್ಸನ್ನು ಸಾಧಿಸಿದ ದಾಖಲೆಗಳಿವೆ.

ಇತ್ತೀಚಿನ ಕಾಲದಲ್ಲಿ ಕರ್ನಾಟಕವು ದೇಶದ ಜ್ಞಾನಾಧರಿತ ಮತ್ತು ತಾಂತ್ರಿಕ ರಾಜ್ಯಧಾನಿಯಾಗಿ ಹೊರಹೊಮ್ಮಿದ್ದು, ಹೊಸ ಇಕಾನಮಿಯಲ್ಲಿ ಕೂಡಾ ದಾಪುಗಾಲು ಹಾಕುತ್ತಿದೆ. ಮಾಹಿತಿ ತಂತ್ರಜ್ಞಾನ ಮತ್ತು ಸಂಬಂಧಿತ ಕೈಗಾರಿಕೆಗಳು, ಬಯೋ ಟೆಕ್ನಾಲಜಿ ಮತ್ತು ಸದೃಢವಾದ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು ಕರ್ನಾಟಕಕ್ಕೆ ಜಾಗತಿಕ ಮಾರುಕಟ್ಟೆಯಲ್ಲಿ ಹೆಮ್ಮೆಯ ಸ್ಥಾನವನ್ನು ನೀಡಿದೆ. ಕರ್ನಾಟಕವು ದೇಶದಲ್ಲಿ ಕೈಗಾರಿಕಾ ಅಭಿವೃದ್ಧಿ ಹೊಂದಿದ ಐದು ಅಗ್ರ ರಾಜ್ಯಗಳ ಪೈಕಿ ಒಂದಾಗಿದ್ದು, ಇಲೆಕ್ಟ್ರಾನಿಕ್ಸ್, ಟೆಲಿಕಮ್ಯುನಿಕೇಶನ್, ಮಾಹಿತಿ ತಂತ್ರಜ್ಞಾನ, ಪ್ರೆಸಿಷನ್ ಇಂಜಿನಿಯರಿಂಗ್, ಆಟೋಮೊಬೈಲ್, ಸಿದ್ಧ ಉಡುಪುಗಳು, ಬಯೋ ಟೆಕ್ನಾಲಜಿ ಮತ್ತು ಆಹಾರ ಸಂಸ್ಕರಣಾ ಮೊದಲಾದ ಪ್ರಮುಖ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದೆ. ಬೆಂಗಳೂರು ಮತ್ತು ರಾಜ್ಯದ ಇತರ ಪ್ರದೇಶಗಳಿಗೆ ಹರಿದು ಬರುತ್ತಿರುವ ಗಣನೀಯ ಫಾರಿನ್ ಡೈರೆಕ್ಟ್ ಇನ್‌ವೆಸ್ಟ್‌ಮೆಂಟ್ ಇದಕ್ಕೆ ಸಾಕ್ಷಿಯಾಗಿದೆ.

ಮೇಲಿನ ಉಲ್ಲೇಖ (5) ರಲ್ಲಿ ಹೇಳಿದ ಸರ್ಕಾರಿ ಆದೇಶ ದಿ. 20.06.2001ರ ಪ್ರಕಾರ ಸರ್ಕಾರವು ಪ್ರಕಟಿಸಿದ ಕೈಗಾರಿಕಾ ನೀತಿ 2001-06 ಯಲ್ಲಿ ಭಾರತ ಸರ್ಕಾರದ ಉದಾರ ಆರ್ಥಿಕ ನೀತಿಯಲ್ಲಿ ಹಲವಾರು ಅಂಶಗಳನ್ನು, ಕೈಗಾರಿಕಾ ಬೆಳವಣಿಗೆಗೆ ಮತ್ತು ಗುರುತಿಸಲ್ಪಟ್ಟ ಕ್ಷೇತ್ರಗಳಿಗೆ ಬಂಡವಾಳವನ್ನು ಆಕರ್ಷಿಸಲು ಹಾಗೂ ಕೈಗಾರಿಕೆಗಳ ಸಮತೋಲನವಾದ ವಿಶೇಷವಾಗಿ ರಾಜ್ಯದ ಹಿಂದುಳಿದ ಪ್ರದೇಶಗಳಿಗೆ ಪ್ರಸರಿಸುವ ಸಲುವಾಗಿ ಅಳವಡಿಸಲಾಗಿದೆ.

2001-06ರ ಕೈಗಾರಿಕಾ ನೀತಿ ಅವಧಿಯಲ್ಲಿ ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿ (SHLCC) ಯಲ್ಲಿ ಯೋಜನೆಗಳಿಗೆ (ರೂ. 50 ಕೋಟಿಗೂ ಮೀರಿದ ಬಂಡವಾಳ ಹೂಡಿಕೆಯ ಯೋಜನೆಗಳು) ಬಂಡವಾಳ ಹೂಡಿಕೆಗಾಗಿ ನೀಡಲಾದ ಅನುಮೋದನೆಗಳು ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ (SLSWA)ಯು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಯೋಜನೆಗಳಿಗೆ  ನೀಡಲಾದ ಅನುಮೋದನೆಗಳು ಗಣನೀಯವಾಗಿ ಹೆಚ್ಚಿರುವುದು / ಬೆಳವಣಿಗೆಯಾಗಿರುವುದು ಕಂಡುಬರುತ್ತದೆ. ಎಸ್.ಹೆಚ್.ಎಲ್.ಸಿ.ಸಿ.ಯಲ್ಲಿ 148 ಯೋಜನೆಗಳು ಮಂಜೂರಾಗಿದ್ದು, ಈ ಯೋಜನೆಗಳಲ್ಲಿ ರೂ. 1,15,882 ಕೋಟಿ ಬಂಡವಾಳ ಹೂಡಿಕೆಯಾಗಿ, 11,03,824 ಜನರಿಗೆ ಉದ್ಯೋಗಾವಕಾಶ ಲಭ್ಯವಾಗುವ ಸಾಧ್ಯತೆಯಿದೆ. ಅದೇ ರೀತಿಯಲ್ಲಿ ಎಸ್.ಎಲ್.ಎಸ್. ಡಬ್ಲ್ಯೂ.ಸಿ.ಸಿ.ಯಲ್ಲಿ 861 ಯೋಜನೆಗಳು ಮಂಜೂರಾಗಿದ್ದು, ಇವುಗಳಲ್ಲಿ ರೂ. 19,043.73 ಕೋಟಿಗಳ ಬಂಡವಾಳ ಹೂಡಿಕೆಯಾಗಿ 5,90,869 ಜನರಿಗೆ ಉದ್ಯೋಗಾವಕಾಶ ಲಭ್ಯತೆ ನಿರೀಕ್ಷಿಸಲಾಗಿದೆ. ಇದೇ ಕೈಗಾರಿಕಾ ನೀತಿಯ ಅವಧಿಯಲ್ಲಿ ಒಟ್ಟು 65,231 ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳು ಪ್ರಾರಂಭಗೊಂಡಿದ್ದು, ಇವುಗಳಲ್ಲಿ ರೂ. 2,079.62 ಕೋಟಿಗಳ ಬಂಡವಾಳ ಹೂಡಲಾಗಿದ್ದು, 2,95,487 ಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸಲಾಗಿದೆ.

ಬೆಂಗಳೂರು ಜ್ಞಾನಾಧರಿತ ಹಾಗೂ ತಂತ್ರಜ್ಞಾನಾಧಾರಿತ ಕೈಗಾರಿಕೆಗಳಿಗೆ, ಅನೇಕ ಬಹು ರಾಷ್ಟ್ರೀಯ ಕಂಪೆನಿಗಳ ತಾಣವೆಂದು ಗುರುತಿಸಲ್ಪಟ್ಟಿದ್ದು, ಇಂದು ಪ್ರಪಂಚದ 10 ಅಗ್ರಗಣ್ಯ ಟೆಕ್ನೋಪೋಲಿಸ್‌ಗಳಲ್ಲಿ ಒಂದಾಗಿ ಪರಿಗಣಿಸಲ್ಪಟ್ಟಿದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿನ ಬೆಳವಣಿಗೆ ಅಮೋಘವಾಗಿದೆ. ಹಾಗೇನೆ ಪೆಟ್ರೋಲಿಯಂ ಮತ್ತು ಪೆಟ್ರೋಲಿಯಂ ಉತ್ಪನ್ನಗಳು, ಕಬ್ಬಿಣದ ಅದಿರು ಮತ್ತು ಖನಿಜ, ರೇಷ್ಮೆ ಉತ್ಪನ್ನಗಳು, ಜೆಮ್ ಮತ್ತು ಆಭರಣಗಳು, ಪ್ಲಾಸ್ಟಿಕ್ ಪದಾರ್ಥಗಳು, ಮೂಲ ರಾಸಾಯನಿಕಗಳು, ಔಷಧಿಗಳು ಮತ್ತು ಕಾಸ್ಮೆಟಿಕ್ ಮೊದಲಾದ ಇತರ ಕ್ಷೇತ್ರಗಳಲ್ಲೂ ಕಳೆದ ಕೈಗಾರಿಕಾ ನೀತಿ ಅವಧಿಯಲ್ಲಿ ಸಾಧಿಸಿದ ಬೆಳವಣಿಗೆ ಗಣನೀಯವಾಗಿದೆ. 2005-06ರಲ್ಲಿ ಕರ್ನಾಟಕ ರಾಜ್ಯವು ರೂ. 82,280 ಕೋಟಿಗಳ ದಾಖಲೆ ರಫ್ತು ವ್ಯವಹಾರ ವನ್ನು ಸಾಧಿಸಿದೆ.

ಸರ್ಕಾರಿ ಆದೇಶ ಸಂ. ಸಿ.ಐ./319/ಎಸ್.ಪಿ.ಐ./2005 ದಿ. 24.10.2005 ರಲ್ಲಿ ಶ್ರೀ ಪಿ.ಪಿ. ಪ್ರಭು, ಐ.ಎ.ಎಸ್. (ನಿವೃತ್ತ) ಇವರ ಅಧ್ಯಕ್ಷತೆಯಲ್ಲಿ ಹಾಗೂ ಅರ್ಥಶಾಸ್ತ್ರದಲ್ಲಿ ಪರಿಣತರಾದ ಒಬ್ಬರು ಮತ್ತು ಕೈಗಾರಿಕೆಯಿಂದ ಒಬ್ಬರು - ಹೀಗೆ ಇಬ್ಬರು ಸದಸ್ಯರುಳ್ಳ ಕೋರ್ ಗ್ರೂಪ್ ಒಂದನ್ನು ಎಪ್ರಿಲ್ 2006 ರಿಂದ ಆರಂಭವಾಗಿ ಮುಂದಿನ ಐದು ವರ್ಷಗಳ ಅವಧಿಯಲ್ಲಿ ರಾಜ್ಯದ ಕೈಗಾರಿಕಾಭಿವೃದ್ಧಿಗೆ ಮಾರ್ಗದರ್ಶಕವಾಗಬಲ್ಲ  ನೂತನ ಕೈಗಾರಿಕಾ ನೀತಿಯ ಸ್ಥೂಲ ರೂಪುರೇಶೆಗಳ ಬಗ್ಗೆ ಸಲಹೆ ನೀಡಲು ರಚಿಸಲಾಗಿತ್ತು.

ಈ ಕೋರ್ ಗ್ರೂಪ್ ಉದ್ಯಮಿಗಳೊಡನೆ, ಕೈಗಾರಿಕಾ ಸಂಘಗಳೊಂದಿಗೆ, ಕಾರ್ಮಿಕ ಪ್ರತಿನಿಧಿಗಳೊಂದಿಗೆ ಹಾಗೂ ಕೈಗಾರಿಕಾ ಕ್ಷೇತ್ರಕ್ಕೆ ಸಂಬಂಧಿಸಿದ ಸರ್ಕಾರಿ ಇಲಾಖೆ / ಸಂಸ್ಥೆ / ಏಜನ್ಸಿಗಳ ಅಧಿಕಾರಿಗಳೊಂದಿಗೆ ಸವಿಸ್ತಾರವಾದ ಚರ್ಚೆ ಮತ್ತು ವಿಚಾರ ವಿನಿಮಯ ನಡೆಸಿದುದಲ್ಲದೆ ಮೈಸೂರು, ಮಂಗಳೂರು, ಹುಬ್ಬಳ್ಳಿ ಮತ್ತು ಗುಲ್ಬರ್ಗಕ್ಕೆ ಭೇಟಿ ನೀಡಿ, ಪ್ರಾದೇಶಿಕ ಕೈಗಾರಿಕಾ ಸಂಘಗಳ ಪ್ರತಿನಿಧಿಗಳೊಡನೆ ಚರ್ಚಿಸಿ, ನೂತನ ಕೈಗಾರಿಕಾ ನೀತಿಯ ಪ್ರಸ್ತಾಪಿತ ಉದ್ದೇಶ ಮತ್ತು ಉಲ್ಲೇಖಿತ ಉದ್ದೇಶ ಸಾಧನೆಗಾಗಿ ರೂಪಿಸಬೇಕಾದ ಕಾರ್ಯತಂತ್ರಗಳನ್ನು ಒಳಗೊಂಡ ವರದಿಯನ್ನು ರಾಜ್ಯ ಸರ್ಕಾರಕ್ಕೆ ದಿ. 18.04.2006 ರಂದು ನೀಡಿರುತ್ತದೆ.

ಭೂಪ್ರದೇಶದ ಲಭ್ಯತೆ ಹಾಗೂ ನೀರಾವರಿ ಸೌಲಭ್ಯದ ಮಿತಿಯಿಂದಾಗಿ, ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳಲ್ಲಿ ಕೃಷಿಯೇತರ ಕ್ಷೇತ್ರದಲ್ಲಿ ಉದ್ಯೋಗಾವಕಾಶ ಹೆಚ್ಚಿಸಲು ಕೈಗಾರಿಕಾ ಅಭಿವೃದ್ಧಿ ಅಗತ್ಯವಾಗಿದೆ. ಇದು ವಿಶೇಷವಾಗಿ ಉದ್ಯೋಗಾವಕಾಶ ಸೃಷ್ಟಿ ಯೋಜನೆ ಮಾತ್ರವಲ್ಲದೆ ಗ್ರಾ,ಮೀಣ ಮತ್ತು ಹಿಂದುಳಿದ ಪ್ರದೇಶಗಳ ಆರ್ಥಿಕ ಅಭಿವೃದ್ಧಿಗಾಗಿ ಮೈಕ್ರೋ ಎಂಟರ್‌ಪ್ರೈಸಸ್‌ಗಳನ್ನು ಸ್ಥಾಪಿಸಲು ಬಯಸುವ ಗ್ರಾಮೀಣ ಪ್ರದೇಶದ ವಿದ್ಯಾವಂತ ಯುವ ಜನರ ಅಶೋತ್ತರಗಳನ್ನು ಉತ್ತೇಜಿಸಲು ಇನ್ನೂ ಅಗತ್ಯವಾಗಿದೆ.

ನೂತನ ಕೈಗಾರಿಕಾ ನೀತಿಯ ಕೋರ್ ಗ್ರೂಪಿನ ಶಿಫಾರಸ್ಸುಗಳ ಆಧಾರದ ಮೇಲೆ ಹಾಗೂ 2001-06ರ ಕೈಗಾರಿಕಾ ನೀತಿಯ ತುಲನಾತ್ಮಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹಾಗೇನೇ ಈ ನೀತಿಯ ಸ್ವೀಕಾರದಿಂದಾಗಿ ಸಾಧಿಸಿದ ಧನಾತ್ಮಕ ಫಲಿತಾಂಶಗಳನ್ನು ಪರಿಗಣಿಸಿ ಮಾತ್ರವಲ್ಲದೆ ಸಂಬಂಧಿತ ಇಲಾಖೆಗಳೊಡನೆ ಇದರ ಎಲ್ಲಾ ಅಂಶಗಳನ್ನು ಚರ್ಚಿಸಿ, ನೂತನ ಕೈಗಾರಿಕಾ ನೀತಿಯನ್ನು ಸ್ವೀಕರಿಸುವ ನಿರ್ಧಾರ ತಳೆಯಲಾಗಿದೆ.

**ಸರ್ಕಾರಿ ಆದೇಶ ಸಿ.ಐ./319/ಎಸ್.ಪಿ.ಐ./2005, ಬೆಂಗಳೂರು, ದಿನಾಂಕ 26ನೇ ಆಗಸ್ಟ್ 2006.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಹಿನ್ನೆಲೆಯಲ್ಲಿ ಸರ್ಕಾರವು ಈ ಆದೇಶದ ಅನುಬಂಧ 'ಎ'ದಲ್ಲಿ ವಿವರಿಸಿರುವಂತೆ ನೂತನ ಕೈಗಾರಿಕಾ ನೀತಿಯನ್ನು ಪ್ರಕಟಿಸಲು ಹರ್ಷಿಸುತ್ತದೆ. ಕರ್ನಾಟಕದ ತಾಲ್ಲೂಕುಗಳನ್ನು ಉತ್ತೇಜನ ಮತ್ತು ರಿಯಾಯಿತಿಗಳನ್ನು ನೀಡುವುದಕ್ಕಾಗಿ ವಲಯಗಳಾಗಿ ವಿಂಗಡಿಸಿರುವ ವಿವರ, ಮೆಗಾ, ಬೃಹತ್ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳಿಗೆ ನೀಡಲಾಗುವ ಉತ್ತೇಜನ ಮತ್ತು ರಿಯಾಯಿತಿಗಳು ಮತ್ತು ಉತ್ತೇಜನ ಮತ್ತು ರಿಯಾಯಿತಿಗಳಿಗೆ ಅನರ್ಹವಾದ ಕೈಗಾರಿಕಾ ಚಟುವಟಿಕೆಗಳ / ಘಟಕದ ಪಟ್ಟಿಯನ್ನು ಅನುಕ್ರಮವಾಗಿ ಈ ಆದೇಶದ ಅನುಬಂಧ 'ಬಿ', 'ಸಿ' ಮತ್ತು 'ಡಿ'ಯಲ್ಲಿ ನೀಡಲಾಗಿದೆ.

2 ನೂತನ ಕೈಗಾರಿಕಾ ನೀತಿ – 2006-11ರ ಪ್ರಮುಖ ಅಂಶಗಳು ಈ ರೀತಿ ಇವೆ :

(i) ಜಿ.ಎಸ್.ಡಿ.ಪಿ. ಬೆಳವಣಿಗೆಯ ಶೇಕಡಾವಾರು ಪ್ರಮಾಣದ ಹೆಚ್ಚಳ, ಉತ್ಪಾದನಾ ಕೈಗಾರಿಕೆಗಳನ್ನು ಬಲಗೊಳಿಸುವುದು, ರಾಷ್ಟ್ರದ ರಫ್ತುಪ್ರಮಾಣದಲ್ಲಿ ಕರ್ನಾಟಕ ರಫ್ತು ಪಾಲಿನ ಹೆಚ್ಚಳ, ಉತ್ಪಾದನೆ ಮತ್ತು ಸೇವಾ ಕ್ಷೇತ್ರಗಳಲ್ಲಿ ಕನಿಷ್ಠ 10 ಲಕ್ಷ ಜನರಿಗೆ ಹೆಚ್ಚುವರಿ ಉದ್ಯೋಗಾವಕಾಶ, ವೈವಿಧ್ಯೀಕೃತ ಕೈಗಾರಿಕಾ ತಳಹದಿಯ ಪ್ರವರ್ತನೆ, ಆರ್ಥಿಕ ಅಭಿವೃದ್ಧಿ ವಿಚಾರದಲ್ಲಿ ಪ್ರಾಂತೀಯ ಅಸಮತೋಲನವನ್ನು ಕಡಿಮೆಗೊಳಿಸುವುದು, ಉದ್ಯೋಗಾವಕಾಶದ ಸೃಷ್ಟಿಯ ಗುರಿಯೊಂದಿಗೆ ಅಂತಿಮವಾಗಿ ರಾಜ್ಯದ ಸಮಗ್ರ ಸಾಮಾಜಿಕ – ಆರ್ಥಿಕ ಅಭಿವೃದ್ಧಿಯ ಗುರಿಸಾಧನೆ.

(ii) ಮುಂದಿನ ಐದು ವರ್ಷಗಳಲ್ಲಿ ರಾಜ್ಯದ ಕೈಗಾರಿಕೀಕರಣದ ಹೆಚ್ಚಳಕ್ಕಾಗಿ ಅಳವಡಿಸುವ ಕಾರ್ಯತಂತ್ರಗಳಲ್ಲಿ, ಕೈಗಾರಿಕಾ ಬೆಳವಣಿಗೆಗಾಗಿ ಅತಿ / ಹೆಚ್ಚು ಹಿಂದುಳಿದ ತಾಲ್ಲೂಕುಗಳ ಮೇಲೆ ಗಮನ ನೀಡುವ ಉದ್ದೇಶದಿಂದ ತಾಲ್ಲೂಕುಗಳ ವಲಯವಾರು ವಿಂಗಡಣೆ, ರಾಜ್ಯದ ಪ್ರಮುಖ ಪ್ರದೇಶಗಳಲ್ಲಿ ಸಮಗ್ರವಾದ ರೀತಿಯಲ್ಲಿ ಕೈಗಾರಿಕಾ ಮೂಲಭೂತ ಸೌಕರ್ಯಗಳು ಸದಾ ಲಭ್ಯವಾಗುವಂತೆ ಅಭಿವೃದ್ಧಿ, ಅವಕಾಶವುಳ್ಳ ಪ್ರದೇಶಗಳಲ್ಲಿ ಬೃಹತ್ ನೀರು ಸರಬರಾಜು ಯೋಜನೆಗಳನ್ನು ಎಸ್. ಪಿ.ವಿ. ಮುಖಾಂತರ ಅನುಷ್ಠಾನ, ವಿಶೇಷ ಆರ್ಥಿಕ ವಲಯ ಮತ್ತು ನಿರ್ದಿಷ್ಠ ಕ್ಷೇತ್ರಗಳಲ್ಲಿ ವಿಶೇಷ ಕೈಗಾರಿಕಾ ಸೌಕರ್ಯಗಳ ಉತ್ತೇಜನ, ಕೈಗಾರಿಕಾ ಸಮೂಹ / ಕಾರಿಡಾರ್ ಗಳ ಅಭಿವೃದ್ಧಿಗೆ ಒತ್ತಾಸೆ, ಈಗಿರುವ ಮತ್ತು ಹೊಸ ಕೈಗಾರಿಕಾ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳ ಉನ್ನತೀಕರಣಕ್ಕೆ ಪ್ರಾಶಸ್ತ್ಯ ನೀಡುವುದು, ರೂ. 500 ಕೋಟಿಗಳ ಪ್ರಾರಂಭಿಕ ನಿಧಿಯೊಂದಿಗೆ ಮೂಲಭೂತ ಸೌಕರ್ಯ ಉನ್ನತೀಕರಣ ನಿಧಿಯ ರಚನೆ, ಮಾನವ ಸಂಪನ್ಮೂಲ ಅಭಿವೃದ್ಧಿ, ಕೃಷಿ-ಆಹಾರ-ಸಂಸ್ಕರಣಾ ಉದ್ಯಮಗಳ ಪ್ರವರ್ತನೆ, ಸಣ್ಣ ಕೈಗಾರಿಕೆಗಳ ಉಳಿವು ಮತ್ತು ಬೆಳವಣಿಗೆಗಾಗಿ ತಾಂತ್ರಿಕ ಉನ್ನತಿಯ ಅಳವಡಿಕೆ ಮತ್ತು ರೂ. 25 ಕೋಟಿಗಳ ತಾಂತ್ರಿಕ ಉನ್ನತೀಕರಣ ಉತ್ತೇಜನ ನಿಧಿಯ ಸ್ಥಾಪನೆ, ಸಣ್ಣ ಕೈಗಾರಿಕಾ ಕ್ಷೇತ್ರಕ್ಕೆ ಮಾರುಕಟ್ಟೆ ಸಹಾಯ ಮತ್ತು ಸ್ಥಳೀಯ ಉದ್ಯಮಶೀಲತಾಭಿವೃದ್ಧಿಯ ಪ್ರವರ್ತನೆ ಸೇರಿಕೊಂಡಿವೆ.

(iii) ಪ್ರವೇಶ ತೆರಿಗೆ ಮತ್ತು ವಿಶೇಷ ಪ್ರವೇಶ ತೆರಿಗೆಗೆ ಸಂಬಂಧಿತ ಉತ್ತೇಜನ ಮತ್ತು ರಿಯಾಯಿತಿಗಳು, ಪರಿವರ್ತನಾ ಶುಲ್ಕದ ಮನ್ನಾ, ಮುದ್ರಾಂಕ ಶುಲ್ಕದ ವಿನಾಯ್ತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿಯ ನೀಡಿಕೆಯನ್ನು ಕೂಡಾ ಪರಿಗಣಿಸಲಾಗಿದೆ.

3. ಮೇಲಿನ ಕೈಗಾರಿಕಾ ನೀತಿ ಮತ್ತು ಉತ್ತೇಜನ ವಿವರಗಳು ದಿ. 01.04.2006ರಿಂದ ಜಾರಿಗೆ ಬಂದಿರುತ್ತವೆ ಎಂದು ತಿಳಿಯಬೇಕಾಗಿದ್ದು, ಆನಂತರ ಐದು ವರ್ಷಗಳ ಅವಧಿಗೆ ಅಂದರೆ ದಿ. 31.03.2011 ರವರೆಗೆ ಜಾರಿಯಲ್ಲಿರುತ್ತದೆ.

4. ಈ ಆದೇಶವನ್ನು ಯು.ಒ.ನೋಟ್ ಸಂಖ್ಯೆ ಎಫ್. ಡಿ. 1157 ಇಎಕ್ಸ್ ಪಿ - I / 2006 ದಿ. 07.08.2006 ಮತ್ತು 19.08.2006ರ ಅನ್ವಯ ಆರ್ಥಿಕ ಇಲಾಖೆಯ, ಡಿ.ಒ.ಪತ್ರ ಸಂಖ್ಯೆ ಕಂ.ಇ./ಕಾ./2-9/2006, ದಿ. 19.06.2006 ರ ಅನ್ವಯ ಕಂದಾಯ ಇಲಾಖೆಯ, ಡಿ.ಒ.ಪತ್ರ ಸಂಖ್ಯೆ ಎಫ್. ಇ.ಇ. 203 ಇ.ಸಿ.ಒ. 2006, ದಿ. 27.06.2006 ರ ಅನ್ವಯ ಅರಣ್ಯ ಪರಿಸರ ಮತ್ತು ಜೀವಿ ಶಾಸ್ತ್ರ ಇಲಾಖೆಯ, ಡಿ.ಒ.ಪತ್ರ ಸಂಖ್ಯೆ ಪಿ.ಡಿ. 38 ಎ.ಸಿ.ಎಸ್.ಪಿ.ಎಸ್. 2006, ದಿ. 27.06.2006 ರ ಅನ್ವಯ ಯೋಜನೆ ಮತ್ತು ಅಂಕಿಅಂಶ ಇಲಾಖೆಯ, ಯು.ಒ.ನೋಟ್ ಸಂಖ್ಯೆ ಕೃ. ತೋ.ಇ. 111 ತೋ.ಯೋ.ಕಾ. 2006, ದಿ. 24.06.2006 ರ ಅನ್ವಯ ಕೃಷಿ ಮತ್ತು ತೋಟಗಾರಿಕೆ ಇಲಾಖೆಯ, ಯು.ಒ.ನೋಟ್ ಸಂಖ್ಯೆ ಯು.ಡಿ.ಡಿ. 142 ಬಿ.ಎಂ.ಆರ್. 2006 ದಿ. 26.06.2006 ರ ಅನ್ವಯ ನಗರಾಭಿವೃದ್ಧಿ ಇಲಾಖೆಯ, ಡಿ.ಒ.ಪತ್ರ ಸಂಖ್ಯೆ ಇ.ಎನ್. 116 ಪಿ.ಆರ್.ಎಸ್. 2006 ದಿ. 23.06.2006 ರ ಅನ್ವಯ ಇಂದನ ಇಲಾಖೆಯ, ಯು.ಒ.ನೋಟ್ ಸಂಖ್ಯೆ ಡಬ್ಲ್ಯೂ.ಆರ್.ಡಿ. 64 ಎಂ.ಬಿ.ಐ. 2006 ದಿ. 23.06.2006 ರ ಅನ್ವಯ ಜಲಸಂಪನ್ಮೂಲ ಇಲಾಖೆಯ, ಯು.ಒ.ನೋಟ್ ಸಂಖ್ಯೆ ಕಾ. ಇ. 69 ಸ್ವೀಮರ 2006 ದಿ. 28.06.2006 ರ ಅನ್ವಯ ಕಾರ್ಮಿಕ ಇಲಾಖೆಯ, ಡಿ.ಒ.ಪತ್ರ ಸಂಖ್ಯೆ ಟಿ.ಆರ್. ಡಿ./ 40 / ಆರ್. ಮತ್ತು ಐ. / 2006 ದಿ. 27.06.2006 ರ ಅನ್ವಯ ಸಾರಿಗೆ ಇಲಾಖೆಯ ಮತ್ತು ಯು.ಒ.ನೋಟ್ ಸಂಖ್ಯೆ ಸಿ.ಡಿ. : ಎಸ್ಇಸಿವೈ : ಟಿ.- 114 : 2006 ದಿ. 14.08.2006 ರ ಅನ್ವಯ ಸಹಕಾರಿ ಇಲಾಖೆಯ ಅನುಮೋದನೆಯೊಂದಿಗೆ ನೀಡಲಾಗಿದೆ.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಆದೇಶದನ್ವಯ

**(ಕೆ. ಎಂ. ಶಿವಕುಮಾರ್)**
ಸರ್ಕಾರದ ಪ್ರಧಾನಕಾರ್ಯದರ್ಶಿಗಳು
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ.

**ಅನುಬಂಧ - 'ಎ'**

# ನೂತನ ಕೈಗಾರಿಕಾ ನೀತಿ: 2006-11

1 **ಪ್ರಸ್ತಾವನೆ** :

1.1 ಕರ್ನಾಟಕ ರಾಜ್ಯವು ಕೈಗಾರಿಕೀಕರಣದಲ್ಲಿ ಮುಂಚೂಣಿಯಲ್ಲಿರುವ ದೇಶದ ಪ್ರಥಮ ಐದು ರಾಜ್ಯಗಳಲ್ಲೊಂದಾಗಿದೆ. ರಾಜ್ಯವು ಹಿಂದಿನಿಂದಲೂ ಕೈಗಾರಿಕಾಭಿವೃದ್ಧಿಯ ಪ್ರಯತ್ನಗಳನ್ನು ನಡೆಸುವಲ್ಲಿ ಅಗ್ರಗಣ್ಯ ರಾಜ್ಯವಾಗಿದ್ದು, ರಾಜಮನೆತನದ ಮೈಸೂರು ರಾಜ್ಯ ಹಾಗೂ ಸ್ವಾತಂತ್ರ್ಯ ನಂತರದಲ್ಲಿಯೂ ಸಹ ಈ ದಿಸೆಯಲ್ಲಿ ಮೊದಲ ಹೆಜ್ಜೆಗಳನ್ನು ಇಡುತ್ತಾ ಬಂದಿದೆ. ನಮ್ಮ ರಾಜ್ಯವು ದೇಶದಲ್ಲಿಯೇ ಮೊದಲ ಬಾರಿಗೆ 1982-83ರಲ್ಲಿ ರಾಜ್ಯ ಮಟ್ಟದಲ್ಲಿ ಕೈಗಾರಿಕಾ ನೀತಿಯನ್ನು ಪ್ರಕಟಿಸಿದ್ದು, ಆನಂತರ 1988, 1990, 1993, 1996 ಮತ್ತು 2001 ರಲ್ಲಿ ಸಹ ಕೈಗಾರಿಕಾ ನೀತಿಗಳನ್ನು ಪ್ರಕಟಿಸಿರುತ್ತದೆ.

1.2 ಇದೀಗ ಮುಕ್ತಾಯವಾದ 2001-06 ರ ಕೈಗಾರಿಕಾ ನೀತಿಯ ಅವಧಿಯಲ್ಲಿ ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿ (SHLCC) ಯಲ್ಲಿ ಯೋಜನೆಗಳಿಗೆ (ರೂ. 50 ಕೋಟಿಗೂ ಮೀರಿದ ಬಂಡವಾಳ ಹೂಡಿಕೆಯ ಯೋಜನೆಗಳು ) ಬಂಡವಾಳ ಹೂಡಿಕೆಗಾಗಿ ನೀಡಲಾದ ಅನುಮೋದನೆಗಳು ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ (SLSWA)ಯು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಯೋಜನೆಗಳಿಗೆ ನೀಡಲಾದ ಅನುಮೋದನೆಗಳು ಗಣನೀಯವಾಗಿ ಹೆಚ್ಚಿರುವುದು / ಬೆಳವಣಿಗೆಯಾಗಿರುವುದು ಕಂಡುಬರುತ್ತದೆ. ಎಸ್.ಹೆಚ್.ಎಲ್.ಸಿ.ಸಿ.ಯಲ್ಲಿ 148 ಯೋಜನೆಗಳು ಮಂಜೂರಾಗಿದ್ದು, ಈ ಯೋಜನೆಗಳಲ್ಲಿ ರೂ. 1,15,882 ಕೋಟಿ ಬಂಡವಾಳ ಹೂಡಿಕೆಯಾಗಿ, 11,03,824 ಜನರಿಗೆ ಉದ್ಯೋಗಾವಕಾಶ ಲಭ್ಯವಾಗುವ ಸಾಧ್ಯತೆಯಿದೆ. ಅದೇ ರೀತಿಯಲ್ಲಿ ಎಸ್.ಎಲ್.ಎಸ್. ಡಬ್ಲ್ಯೂ.ಸಿ.ಸಿ.ಯಲ್ಲಿ 861 ಯೋಜನೆಗಳು ಮಂಜೂರಾಗಿದ್ದು, ಇವುಗಳಲ್ಲಿ ರೂ. 19,043.73 ಕೋಟಿಗಳ ಬಂಡವಾಳ ಹೂಡಿಕೆಯಾಗಿ 5,90,869 ಜನರಿಗೆ ಉದ್ಯೋಗಾವಕಾಶ ಲಭ್ಯತೆ ನಿರೀಕ್ಷಿಸಲಾಗಿದೆ. ಇದೇ ಕೈಗಾರಿಕಾ ನೀತಿಯ ಅವಧಿಯಲ್ಲಿ ಒಟ್ಟು 65,231 ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳು ಪ್ರಾರಂಭಗೊಂಡಿದ್ದು, ಇವುಗಳಲ್ಲಿ ರೂ. 2,079.62 ಕೋಟಿಗಳ ಬಂಡವಾಳ ಹೂಡಲಾಗಿದ್ದು, 2,95,487 ಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸಲಾಗಿದೆ.

1.3 2005-06ನೇ ಸಾಲಿನಲ್ಲಿ ಜಿ.ಡಿ.ಪಿ. ಬೆಳವಣಿಗೆ ದರ ಶೇ.8.7 ಆಗಿದ್ದು, ಇದರಲ್ಲಿ ಕೈಗಾರಿಕಾ ಕ್ಷೇತ್ರದ ಪಾಲು ಶೇ. 18 ಆಗಿರುತ್ತದೆ. ಇದನ್ನು ಗಣನೆಯಲ್ಲಿಟ್ಟುಕೊಂಡು ನೂತನ ನೀತಿಯಲ್ಲಿ ಶೇ.9ರ ಜಿ.ಎಸ್.ಡಿ.ಪಿ. ಬೆಳವಣಿಗೆ ದರವನ್ನು ಸಾಧಿಸುವುದನ್ನು ಉದ್ದೇಶವಾಗಿಟ್ಟುಕೊಳ್ಳುವುದು ಅವಶ್ಯಕವಾಗಿದೆ.

1.4 2002-03 ರವರೆಗೆ ಕೈಗಾರಿಕಾ ಕ್ಷೇತ್ರದಲ್ಲಿ ಕುಸಿತ / ಇಳಿತ ಕಂಡುಬಂದಿದ್ದು, ಇದೀಗ ಹೆಚ್ಚಿನ ಬಂಡವಾಳ ಹೂಡಿಕೆ ಮತ್ತು ಪ್ರಗತಿ ಆರಂಭವಾಗತೊಡಗಿದೆ. ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿ ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಗಳಲ್ಲಿ ಅನುಮೋದಿಸಲಾದ ಬಂಡವಾಳ ಹೂಡಿಕೆ ಪ್ರಸ್ತಾವನೆಗಳು ಇದಕ್ಕೆ ನಿದರ್ಶನವಾಗಿವೆ.

1.5 ಆದರೂ ಈ ರೀತಿಯ ಹೆಚ್ಚಿನ ಬಂಡವಾಳ ಹೂಡಿಕೆಯ ಪ್ರಸ್ತಾವನೆಗಳು ಶೀಘ್ರವಾಗಿ ಅನುಷ್ಠಾನವಾಗಲು ಸಾಧ್ಯವಾಗುವಂತೆ :

(ಅ) ಅವಶ್ಯಕತೆಗೆ ತಕ್ಕಂತೆ ಮೂಲಭೂತ ಸೌಕರ್ಯಗಳ ಲಭ್ಯತೆ;

(ಆ) ವಿವಿಧ ಕ್ಷೇತ್ರಗಳಿಗೆ ಅವಶ್ಯವಿರುವ ಮಾನವ ಸಂಪನ್ಮೂಲ;

(ಇ) ತಾಂತ್ರಿಕ ಉನ್ನತೀಕರಣ, ಗುಣಮಟ್ಟ ಸುಧಾರಣಾ ಕಾರ್ಯಗಳಿಗೆ ಬೆಂಬಲ; ಮತ್ತು

(ಈ) ಯೋಜನೆಗಳ ತ್ವರಿತ ಗತಿಯ ಅನುಷ್ಠಾನಕ್ಕಾಗಿ ಏಕಗವಾಕ್ಷಿ ವ್ಯವಸ್ಥೆ, ಮೊದಲಾದ ಸೌಲಭ್ಯಗಳ ಮೂಲಕ ಬೆಂಬಲ ನೀಡುವುದು ಅಗತ್ಯವಾಗಿದೆ.

1.6 ಇಂದು ಬೇರೆ ಬೇರೆ ರಾಜ್ಯಗಳ ನಡುವೆ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸುವುದಕ್ಕಾಗಿ ಅತೀ ಹೆಚ್ಚಿನ ಸ್ಪರ್ಧೆ ಏರ್ಪಡುತ್ತಿದೆ. ಸಾಮಾನ್ಯವಾಗಿ ಬಂಡವಾಳ ಹೂಡಿಕೆದಾರರು ಯಾವುದೇ ರಾಜ್ಯವನ್ನು ಆಯ್ಕೆಮಾಡಿಕೊಳ್ಳುವಾಗ (ಅ) ಕೈಗಾರಿಕಾ ಮತ್ತು ಸಾಮಾಜಿಕ ಮೂಲಭೂತ ಸೌಕರ್ಯಗಳು; (ಆ) ಮಾನವ ಸಂಪನ್ಮೂಲ; (ಇ) ತಾಂತ್ರಿಕವಾಗಿ ನೈಪುಣ್ಯವಿರುವ ಸಿಬ್ಬಂದಿ ಮತ್ತು (ಈ) ಸುಲಲಿತ ವ್ಯವಹಾರಕ್ಕಾಗಿ ಸರ್ಕಾರ ನೀಡುವ ಬೆಂಬಲ, ಮೊದಲಾದ ಅಂಶಗಳನ್ನು ಪರಿಗಣಿಸುತ್ತಾರೆ.

1.7 ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀಡುವ ಹಣಕಾಸು / ತೆರಿಗೆಗೆ ಸಂಬಂಧಿಸಿದ ಉತ್ತೇಜನ ಮತ್ತು ರಿಯಾಯಿತಿಗಳು ಸಹ ಯೋಜನೆಗಳ ಅನುಷ್ಠಾನಕ್ಕೆ ಸ್ಥಳಗಳ ಆಯ್ಕೆಯಲ್ಲಿ ಪರಿಣಾಮ ಬೀರುತ್ತವೆ.

1.8 ಭಾರತದ ರಾಷ್ಟ್ರಪತಿಗಳಾದ ಸನ್ಮಾನ್ಯ ಡಾ: ಎ.ಪಿ.ಜೆ. ಅಬ್ದುಲ್ ಕಲಾಂ ರವರು ದಿನಾಂಕ 20.11.2005 ರಂದು ಸುವರ್ಣ ಕರ್ನಾಟಕ ಉತ್ಸವದ ಆಚರಣೆಯ ಉದ್ಘಾಟನಾ ಸಂದರ್ಭದಲ್ಲಿ ಕರ್ನಾಟಕ ವಿಧಾನಮಂಡಲದಲ್ಲಿ ಮಾನ್ಯ ಶಾಸಕರನ್ನು ಉದ್ದೇಶಿಸಿ ಮಾತನಾಡಿದ ಸಂದರ್ಭದಲ್ಲಿ ಕರ್ನಾಟಕವನ್ನು ಸಮೃದ್ಧಿಗೊಳಿಸಲು 11 ಧ್ಯೇಯೋದ್ದೇಶಗಳನ್ನು ಸೂಚಿಸಿರುತ್ತಾರೆ. ಅವುಗಳಲ್ಲಿ ಜವಳಿ, ಬಯೋ-ಫ್ಯೂಯೆಲ್, ಆಹಾರ ಸಂಸ್ಕರಣೆ ಮತ್ತು ಉದ್ಯಮಶೀಲತೆಗೆ ಸಂಬಂಧಿಸಿದ ಧ್ಯೇಯೋದ್ದೇಶಗಳು ಕೈಗಾರಿಕಾ ಕ್ಷೇತ್ರಕ್ಕೆ ಸಂಬಂಧಿಸಿದ್ದು ಆಗಿರುತ್ತವೆ.

1.9 ಸರ್ಕಾರವು ವಿವಿಧ ಹಿಂದುಳಿದ ಪ್ರದೇಶಗಳು / ಜಿಲ್ಲೆಗಳಿಗೆ ಕೈಗಾರಿಕಾ ಬಂಡವಾಳವನ್ನು ಆಕರ್ಷಿಸುವ ಉದ್ದೇಶಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುವುದು. ಇದರಿಂದಾಗಿ ಆರ್ಥಿಕ ಬೆಳವಣಿಗೆಯ ಫಲ ಮತ್ತು ಉದ್ಯೋಗಾವಕಾಶಗಳನ್ನು ಸಮಾಜದ ಎಲ್ಲಾ ವರ್ಗಗಳು ಹಾಗೂ ಪ್ರದೇಶಗಳಿಗೆ ಸಮಾನವಾಗಿ ಹಂಚಿದಂತೆ ಆಗುತ್ತದೆ.

1.10 ಈ ನೂತನ ಕೈಗಾರಿಕಾ ನೀತಿ 2006-11 ರಲ್ಲಿ, ಮೇಲಿನ ಅಂಶಗಳನ್ನು ಸಮತೋಲನವಾಗಿ ಅನುಷ್ಠಾನಗೊಳಿಸಲು ಪ್ರಯತ್ನಿಸಲಾಗುವುದು.

**2 ದೃಷ್ಟಿಕೋನ** :

2.1 ಈ ನೀತಿಯು ಕೈಗಾರಿಕಾ ಕ್ಷೇತ್ರದ ಬೆಳವಣಿಗೆಯನ್ನು ಶೇ. 12 ಕ್ಕಿಂತ ಹೆಚ್ಚಾಗಿ ಸಾಧಿಸಿ ತನ್ಮೂಲಕ ರಾಜ್ಯದಲ್ಲಿ ಶೇ.9ಕ್ಕಿಂತ ಹೆಚ್ಚು ಜಿ.ಎಸ್.ಡಿ.ಪಿ. ಬೆಳವಣಿಗೆ ಹೊಂದಲು ಸಹಕಾರಿಯಾಗಲಿದೆ.

2.2 ರಾಜ್ಯದಲ್ಲಿ ಕೈಗಾರಿಕಾ ಉತ್ಪಾದನಾ ಕ್ಷೇತ್ರವನ್ನು ಬಲಗೊಳಿಸಿ ಜಿ.ಎಸ್.ಡಿ.ಪಿ.ಗೆ ಈ ಕ್ಷೇತ್ರದ ಕೊಡುಗೆಯನ್ನು ಪ್ರಸ್ತುತ ಸರಾಸರಿ ಶೇ. 16.7 ರಿಂದ, ನೀತಿಯ ಅವಧಿಯ ಅಂತ್ಯದೊಳಗೆ ಶೇ. 20ಕ್ಕೂ ಮೀರಿ ಹೆಚ್ಚುಗೊಳಿಸುವುದು.

2.3 ರಾಷ್ಟ್ರೀಯ ಒಟ್ಟು ರಫ್ತಿನ ಪ್ರಮಾಣದಲ್ಲಿ ಕರ್ನಾಟಕ ರಾಜ್ಯದ ರಫ್ತು ಪ್ರಮಾಣವನ್ನು ಈ ನೀತಿಯ ಅವಧಿ ಮುಗಿಯುವುದರೊಳಗೆ ಪ್ರಸ್ತುತ ಇರುವ ಶೇ. 14 ರಿಂದ ಶೇ.20 ರಷ್ಟಕ್ಕೆ ಸಾಧಿಸಲು ಕ್ರಮ ಕೈಗೊಳ್ಳುವುದು.

24 ಈ ನೀತಿಯ ಅವಧಿಯಲ್ಲಿ ಉತ್ಪಾದನೆ ಹಾಗೂ ಸೇವಾ ಕ್ಷೇತ್ರಗಳಲ್ಲಿ ಕನಿಷ್ಠ 10 ಲಕ್ಷ ಅಧಿಕ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು.

25 ಹಳೆಯ ಮತ್ತು ನೂತನ ಆರ್ಥಿಕ ವ್ಯವಸ್ಥೆಯ ಬಲದಲ್ಲಿ ಭದ್ರವಾದ ಕೈಗಾರಿಕಾ ತಳಹದಿಯನ್ನು ಪ್ರವರ್ತನೆ ಮಾಡುವುದು.

26 ಆರ್ಥಿಕ ಅವಕಾಶಗಳು, ಉದ್ಯೋಗಾವಕಾಶ ಮತ್ತು ಬೆಳವಣಿಗೆ - ಇವುಗಳ ಪ್ರಾದೇಶಿಕ ಅಸಮತೋಲನೆಯನ್ನು ಕಡಿಮೆ ಮಾಡುವತ್ತ ಅನುವು ಮಾಡುವುದು.

27 ಹೆಚ್ಚಿನ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವ ಮೂಲಕ ಕೈಗಾರಿಕಾ ಬೆಳವಣಿಗೆಯನ್ನು ಮುಂದುವರೆಸಿಕೊಂಡು ಹೋಗುವುದು.

28 ಒಟ್ಟಾರೆಯಾಗಿ, ರಾಜ್ಯದ ಸಮಗ್ರ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಯ ಸಾಧನೆಗಾಗಿ ಸ್ಥಿರವಾದ ಮತ್ತು ಬೆಳವಣಿಗೆ ಆಧರಿತ ಕೈಗಾರಿಕೀಕರಣದಿಂದ ಉದ್ಯೋಗ ಮತ್ತು ಆದಾಯ ಸೃಷ್ಟಿ, ಈ ನೀತಿಯ ಪ್ರಮುಖ ಉದ್ದೇಶವಾಗಿದೆ.

3 **ಕಾರ್ಯತಂತ್ರ** :

ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಐದು ವರ್ಷಗಳಲ್ಲಿ ರಾಜ್ಯದಲ್ಲಿ ಕೈಗಾರಿಕೀಕರಣವನ್ನು ಹೆಚ್ಚಿಸುವ ಉದ್ದೇಶ ಸಾಧನೆಯಲ್ಲಿ ಈ ಕೆಳಗಿನ ಕಾರ್ಯತಂತ್ರಗಳನ್ನು ಬಳಸಲಾಗುವುದು:

31 ಅಭಿವೃದ್ಧಿಗಾಗಿ ನೀಡಲಾಗುವ ಗಮನವನ್ನು ಕೇಂದ್ರೀಕೃತಗೊಳಿಸುವ ದೃಷ್ಟಿಯಿಂದ ರಾಜ್ಯದ ವಿವಿಧ ತಾಲ್ಲೂಕುಗಳನ್ನು ಮೂರು ವಲಯಗಳನ್ನಾಗಿ ವಿಂಗಡಿಸಲಾಗುವುದು:

(ಅ) ವಲಯ-1 : 79 ತಾಲ್ಲೂಕುಗಳು - ಡಾ. ಡಿ.ಎಂ. ನಂಜುಂಡಪ್ಪ ಸಮಿತಿ ವರದಿಯಲ್ಲಿ ವಿಂಗಡಿಸಿರುವ ಅತೀ ಹೆಚ್ಚು / ಹೆಚ್ಚು ಹಿಂದುಳಿದ ತಾಲ್ಲೂಕುಗಳು;

(ಆ) ವಲಯ-2: 85 ತಾಲ್ಲೂಕುಗಳು - (ವಲಯ 1 & 3 ರಲ್ಲಿ ಒಳಪಡದ ತಾಲ್ಲೂಕುಗಳು);

(ಇ) ವಲಯ-3: 12 ತಾಲ್ಲೂಕುಗಳು - ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ (ಕನಕಪುರ ಮತ್ತು ಮಾಗಡಿ ತಾಲ್ಲೂಕುಗಳನ್ನು ಹೊರತುಪಡಿಸಿ) ತಾಲ್ಲೂಕುಗಳು ಹಾಗೂ ಮಂಗಳೂರು ಮತ್ತು ಮೈಸೂರು ತಾಲ್ಲೂಕುಗಳು.

ಈ ತಾಲ್ಲೂಕುಗಳ ವಿವರಗಳನ್ನು **ಅನುಬಂಧ 'ಬ'**ಯಲ್ಲಿ ನೀಡಲಾಗಿದೆ.

32 ಕೆ.ಐ.ಎ.ಡಿ.ಬಿ/ಕೆ.ಎಸ್.ಎಸ್.ಐ.ಡಿ.ಸಿ. ವತಿಯಿಂದ ಅವಶ್ಯಕತೆಗಳಿಗೆ ಅನುಗುಣವಾಗಿ ಕೈಗಾರಿಕಾ ಮೂಲಭೂತ ಸೌಕರ್ಯಗಳನ್ನು ಬಳಕೆಗೆ ಸಿದ್ಧವಾಗಿರುವಂತೆ ಮುಂಚಿತವಾಗಿಯೇ ಅಭಿವೃದ್ಧಿಗೊಳಿಸುವುದು. ಈ ನೀತಿಯ ಅವಧಿಯಲ್ಲಿ ಪ್ರತಿವರ್ಷ ಕನಿಷ್ಟ 5,000 ಎಕರೆ ಉತ್ತಮ ಗುಣಮಟ್ಟವುಳ್ಳ ಭೂಮಿಯನ್ನು ಅಭಿವೃದ್ಧಿಪಡಿಸಲಾಗುವುದು. ವಸತಿ ಮತ್ತು ಇತರೆ ಸಾಮಾಜಿಕ ಮೂಲಭೂತ ಸೌಲಭ್ಯಗಳಿಗಾಗಿ ಶೇ.25ರಷ್ಟು ಪ್ರದೇಶವನ್ನು ಮೀಸಲಿಡಲಾಗುವುದು. ಕೆ.ಐ.ಎ.ಡಿ.ಬಿ.ನ ಷೇರು ಬಂಡವಾಳವನ್ನು ಹೆಚ್ಚಿನ ಬೆಂಬಲದ ಮೂಲಕ ಬಲಗೊಳಿಸಲಾಗುವುದು.

3.3 ಕೈಗಾರಿಕೀಕರಣಗೊಳಿಸಲು ನೀರಿನ ಪೂರೈಕೆ ಅತ್ಯಂತ ಪ್ರಮುಖ ಅಂಶವೆಂಬುದನ್ನು ಗಮನದಲ್ಲಿಟ್ಟುಕೊಂಡು, ವಿಶೇಷ ಉದ್ದೇಶಿತ ಸಂಸ್ಥೆಗಳ (SPV) ಮೂಲಕ ಬೃಹತ್ ಕೈಗಾರಿಕಾ ನೀರು ಸರಬರಾಜು ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳುವುದು.

3.4 ಸಮಗ್ರ ವಿದ್ಯುಚ್ಛಕ್ತಿ ನೀತಿಯೊಂದನ್ನು ಇಂಧನ ಇಲಾಖೆಯು ರೂಪಿಸುವುದು. ಈ ನೀತಿಯು ವಿವಿಧ ವಿದ್ಯುಚ್ಛಕ್ತಿ ಹಾಗೂ ಸ್ವಂತಬಳಕೆಗಾಗಿ ವಿದ್ಯುತ್ ಉತ್ಪಾದನೆಗೆ ಉತ್ತೇಜನ ನೀಡಲಿದೆ.

3.5 ರಾಜ್ಯದಲ್ಲಿ ತ್ವರಿತ ಕೈಗಾರಿಕೀಕರಣದಿಂದಾಗಿ ಹೆಚ್ಚುತ್ತಿರುವ ಇಂಧನ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಸರ್ಕಾರಿ / ಖಾಸಗಿ ಕ್ಷೇತ್ರದ ಸಂಸ್ಥೆಗಳು ವಿವಿಧ ಮೂಲಗಳಿಂದ ಅನಿಲ ಇಂಧನವನ್ನು ವಿತರಿಸಲು ಅನುಕೂಲವಾಗುವಂತೆ "ಅನಿಲ ವಿತರಣಾ ಮಾಸ್ಟರ್ ಪ್ಲಾನನ್ನು" ಸರ್ಕಾರವು ಅನುವು ಮಾಡಿಕೊಡುವುದು.

3.6 ಪ್ರಸ್ತುತ ಕೈಗಾರಿಕಾ ಪ್ರದೇಶಗಳು ಮತ್ತು ಕೈಗಾರಿಕಾ ವಸಾಹತುಗಳ ರೂಪದಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳ ಜೊತೆಗೆ, ನಿರ್ದಿಷ್ಟ ಕ್ಷೇತ್ರ ಮತ್ತು ವಿಶೇಷ ಆರ್ಥಿಕ ವಲಯ (ಬಹು ಉತ್ಪನ್ನಗಳು, ನಿರ್ದಿಷ್ಟ ಉತ್ಪನ್ನ, ಕ್ಷೇತ್ರ ಆಧಾರಿತ ಮತ್ತು ಮುಕ್ತ ವ್ಯಾಪಾರ ವಲಯ)ಗಳಿಗೆ ಅಗತ್ಯವಿರುವ ವಿಶೇಷ ಕೈಗಾರಿಕಾ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಕೆ.ಐ.ಎ.ಡಿ.ಬಿ. ಹಾಗೂ ಖಾಸಗಿ ಕ್ಷೇತ್ರದ ಪ್ರವರ್ತಕರನ್ನು ಉತ್ತೇಜಿಸಲಾಗುವುದು. ಬೆಂಗಳೂರು ನಗರ ಜಿಲ್ಲೆಯನ್ನು ಹೊರತುಪಡಿಸಿ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಬಹು ಪದಾರ್ಥಗಳು ಮತ್ತು ನಿರ್ದಿಷ್ಟ ಪದಾರ್ಥಗಳ ತಯಾರಿಕೆಗಾಗಿ ವಿಶೇಷ ಆರ್ಥಿಕ ವಲಯಗಳನ್ನು ಸ್ಥಾಪಿಸಲು ಉತ್ತೇಜನ ನೀಡಲಾಗುವುದು. ಆದರೂ ಸಹ ಎಸ್.ಇ.ಝೆಡ್ ಪ್ರವರ್ತಕರು ತಮ್ಮ ಸ್ವಂತ ಭೂಮಿಯಲ್ಲಿ ಅಥವಾ ಇತರೆ ಭೂಮಾಲೀಕರೊಂದಿಗೆ ಜಂಟಿ ಅಭಿವೃದ್ಧಿ ಒಪ್ಪಂದವನ್ನು ಮಾಡಿಕೊಂಡಿರುವ ಸಂದರ್ಭಗಳಲ್ಲಿ, ಬೆಂಗಳೂರು ನಗರ ಜಿಲ್ಲೆಯಲ್ಲಿಯೂ ಸಹ ವಿಶೇಷ ಆರ್ಥಿಕ ವಲಯಗಳನ್ನು ಸ್ಥಾಪಿಸಲು ಉತ್ತೇಜನವನ್ನು ನೀಡಲಾಗುವುದು.

3.7 ಒ.ಎನ್.ಜಿ.ಸಿ. ಸಂಸ್ಥೆಯು ಕರ್ನಾಟಕ ಸರ್ಕಾರದ ಸಹಯೋಗದಲ್ಲಿ ಪೆಟ್ರೋಲ್ ಪದಾರ್ಥಗಳ ಸಂಸ್ಕರಣೆ ಮತ್ತು ಪೆಟ್ರೋ ರಾಸಾಯನಿಕ ಯೋಜನೆಗಳನ್ನು ಒಳಗೊಂಡಂತೆ ವಿವಿಧ ಉತ್ಪನ್ನಗಳ ಬೃಹತ್ ವಿಶೇಷ ಆರ್ಥಿಕ ವಲಯವನ್ನು ಅನುಷ್ಠಾನಗೊಳಿಸುತ್ತಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಭಾರತ ಸರ್ಕಾರದೊಂದಿಗೆ ಮಂಗಳೂರು ಎಸ್.ಇ.ಝೆಡ್. ಲಿಮಿಟೆಡ್ ಸಂಸ್ಥೆಯ ಗಾತ್ರ ಮತ್ತು ವ್ಯಾಪ್ತಿಯನ್ನು ವಿಸ್ತರಿಸಿ ಇದನ್ನು ಪೆಟ್ರೋಲಿಯಂ, ರಾಸಾಯನಿಕಗಳು ಮತ್ತು ಪೆಟ್ರೋ ರಾಸಾಯನಿಕಗಳ ಬಂಡವಾಳ ಪ್ರದೇಶ (PCPIR)ವನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳುವುದು.

3.8 ಅವಕಾಶವಿರುವ ಸ್ಥಳಗಳಲ್ಲಿ ಕೈಗಾರಿಕಾ ಕಾರಿಡಾರ್ / ಸಮೂಹಗಳ ಅಭಿವೃದ್ಧಿಯನ್ನು ಉತ್ತೇಜಿಸಲಾಗುವುದು.

3.9 ವಿವಿಧ ಪಾಲುದಾರಿಕೆ ಮತ್ತು ಹಣಕಾಸು ಪೂರೈಕೆ ಮಾದರಿಗಳ ಮೂಲಕ ರಾಜ್ಯದಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಯನ್ನು ಉತ್ತೇಜಿಸಲಾಗುವುದು.

3.10 ರಾಜ್ಯವು ಕ್ಷಮತೆ ಹೊಂದಿರುವ ವಾಯುಯಾನ, ಇಂಜಿನಿಯರಿಂಗ್, ಅಟೋಮೊಬೈಲ್, ಮೆಷಿನ್ ಟೂಲ್ಸ್, ಉಕ್ಕು, ಸಿಮೆಂಟ್, ಔಷಧಿಗಳು, ಆಹಾರ ಸಂಸ್ಕರಣೆ, ಜವಳಿ ಮತ್ತು ಸಿದ್ಧ ಉಡುಪುಗಳು, ವಿದ್ಯುನ್ಮಾನ ಕೈಗಾರಿಕೆಗಳು, ಸಾಫ್ಟ್‌ವೇರ್ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಇತ್ಯಾದಿ ಉಪಕ್ಷೇತ್ರಗಳ ಅಭಿವೃದ್ಧಿಗೆ ಕೇಂದ್ರೀಕೃತ ಗಮನವನ್ನು ಹರಿಸಲಾಗುವುದು.

3.11 ನೂಲು ಬಿಚ್ಚುವ ಕ್ಷೇತ್ರವು ಹೆಚ್ಚಿನ ಉದ್ಯೋಗಾವಕಾಶಗಳನ್ನು ಒದಗಿಸುವುದನ್ನು ಗಮನಿಸಿ, ರೇಷ್ಮೆ ಇಲಾಖೆಯೊಂದಿಗೆ ಸಮಾಲೋಚಿಸಿ ಈ ಕ್ಷೇತ್ರಗಳಿಗೆ ಪ್ರತ್ಯೇಕ ಪ್ಯಾಕೇಜ್ ಒಂದನ್ನು ರೂಪಿಸಲಾಗುವುದು.

3.12 ಸಾಂಪ್ರದಾಯಿಕ ಮತ್ತು ಅಸಂಪ್ರದಾಯಿಕ ಇಂಧನಗಳ ಮೂಲಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಘನೋದ್ದೇಶ ಮೂಲಕ ಒತ್ತಾಸೆ ನೀಡಲಾಗುವುದು.

3.13 ಮಾನವ ಸಂಪನ್ಮೂಲ ಅಭಿವೃದ್ಧಿ : ಉತ್ಪನ್ನ / ತಯಾರಿಕಾ ಕೈಗಾರಿಕೆಗಳು ಮತ್ತು ಸೇವಾ ಕ್ಷೇತ್ರದಲ್ಲಿ ಮುಂದೆ ಸೃಷ್ಠಿಯಾಗುವ ಉದ್ಯೋಗಗಳಿಗೆ ಅನುಕೂಲವಾಗುವಂತೆ ವಿಶೇಷ ನೈಪುಣ್ಯತೆ ಅಭಿವೃದ್ಧಿಗಾಗಿ ಸಂಸ್ಥೆಗಳನ್ನು ರಾಜ್ಯದ ವಿವಿಧ ಪ್ರಮುಖ ಜಾಗಗಳಲ್ಲಿ ಸ್ಥಾಪಿಸುವ ಸಲುವಾಗಿ ಸರ್ಕಾರವು ಕ್ರಮ ಕೈಗೊಳ್ಳುವುದು ಹಾಗೂ ಅನುಕೂಲ ಒದಗಿಸುವುದು. ಸರ್ಕಾರದ ಬೆಂಬಲದೊಂದಿಗೆ ಖಾಸಗಿ ಮತ್ತು ಸಾರ್ವಜನಿಕ ಸಹಭಾಗಿತ್ವದ ಮೂಲಕ ಅನುಷ್ಠಾನಗೊಳಿಸಲು ಅನುವಾಗುವಂತೆ ಒಂದು ಯೋಜನೆಯನ್ನು ತರಲಾಗುವುದು. ಸರ್ಕಾರವು ಈ ಕೆಳಗೆ ಸೂಚಿಸಿರುವಂತೆ ಭೂಮಿ ನೀಡುವಿಕೆ ಮತ್ತು ಮೂಲಭೂತ ಸೌಕರ್ಯಗಳ ಸೃಜನೆಗಾಗಿ ಆರ್ಥಿಕ ಸಹಾಯ ನೀಡುವುದು:

(ಅ) ನಿರ್ದಿಷ್ಟ ಕ್ಷೇತ್ರದಲ್ಲಿ ತರಬೇತಿಗಾಗಿ ಕೇಂದ್ರವನ್ನು ಸ್ಥಾಪಿಸುವುದಾದಲ್ಲಿ ಅವಶ್ಯಕತೆಗೆ ತಕ್ಕಂತೆ ಐದು ಎಕರೆವರೆಗೆ ಸರ್ಕಾರಿ ಜಮೀನು ಒದಗಿಸುವುದು ಹಾಗೂ ಅದರೊಂದಿಗೆ ಕ್ಯಾಪಿಟಲ್ ವೆಚ್ಚದ ಸಲುವಾಗಿ ಯೋಜನಾ ವೆಚ್ಚದ ಶೇ. 50 ರಷ್ಟನ್ನು ರೂ. ಎರಡು ಕೋಟಿಗಳಿಗೆ ಮೀರದಂತೆ ಅನುದಾನವನ್ನಾಗಿ ಒದಗಿಸಲು ಪರಿಗಣಿಸಲಾಗುವುದು.

(ಆ) ತರಬೇತಿ ಕೇಂದ್ರವನ್ನು ನಡೆಸಲು ಆವರ್ತಕ ವೆಚ್ಚವಾಗಿ ಪ್ರತಿ ಅಭ್ಯರ್ಥಿಗೆ ತಿಂಗಳಿಗೆ ರೂ. 750 ರಂತೆ ಮೂರು ವರ್ಷಗಳವರೆಗೆ ಪ್ರತಿ ವರ್ಷಕ್ಕೆ ರೂ. 15 ಲಕ್ಷಗಳಿಗೆ ಮೀರದಂತೆ ಹಣಕಾಸು ಸೌಲಭ್ಯವನ್ನು ಒದಗಿಸುವುದು.

(ಇ) ನಿರುದ್ಯೋಗಿ ವಿದ್ಯಾವಂತ ಯುವಜನರಿಗೆ ವೃತ್ತಿಪರ (on-the-job training) ತರಬೇತಿಯನ್ನು ವಿವಿಧ ವೃತ್ತಿಗಳಲ್ಲಿ ಕೈಗಾರಿಕಾ / ಸೇವಾ ಘಟಕಗಳಲ್ಲಿ ಒದಗಿಸುವ ಸಲುವಾಗಿ ಸರ್ಕಾರವು ಒಂದು ನೂತನ ಯೋಜನೆಯನ್ನು ರೂಪಿಸಲಿದ್ದು, ಅದರಲ್ಲಿ ಪ್ರತಿ ಅಭ್ಯರ್ಥಿಗೆ ಪ್ರತಿ ತಿಂಗಳು ರೂ. 750 ರಂತೆ ವಿದ್ಯಾರ್ಥಿ ವೇತನ ನೀಡಲಾಗುವುದು. ತರಬೇತಿ ಸಂಸ್ಥೆಗಳು ಮತ್ತು ಇತರೆ ಅವಶ್ಯಕ ಸೌಲಭ್ಯಗಳನ್ನು ಅನುರೂಪದ ಕೊಡುಗೆಯಾಗಿ ನೀಡಲು ಪರಿಗಣಿಸ ಬಹುದಾಗಿರುತ್ತದೆ.

ಈ ಯೋಜನೆಯ ರೂಪು ರೇಷೆಗಳನ್ನು ಸರ್ಕಾರವು ಪ್ರತ್ಯೇಕವಾಗಿ ನೀಡುವುದು.

3.14 ಕೃಷಿ ಆಹಾರ ಸಂಸ್ಕರಣಾ ಕೈಗಾರಿಕೆಗಳ ಸ್ಥಾಪನೆಯನ್ನು ಉತ್ತೇಜಿಸುವ ಮೂಲಕ ರೈತರ ಉತ್ಪಾದನೆಗಳಿಗೆ ಹೆಚ್ಚಿನ ಬೆಲೆ ಲಭಿಸುವುದು ಸಾಧ್ಯವಾಗುವಂತೆ ಕೃಷಿ ಉತ್ಪನ್ನಗಳನ್ನು ಸ್ಥಳೀಯವಾಗಿ ಸಂಸ್ಕರಣೆಗೊಳಿಸಲು ಪ್ರವರ್ತನ ಕಾರ್ಯ ಕೈಗೊಳ್ಳಲಾಗುವುದು. ಹೊಸ ಕೃಷಿ ಉತ್ಪನ್ನ ಸಂಸ್ಕರಣಾ ಕೈಗಾರಿಕೆಗಳ ಸ್ಥಾಪನೆಗೆ ಉತ್ತೇಜನ ನೀಡುವ ಸಲುವಾಗಿ ಸಂಸ್ಕರಣಾ ಕೈಗಾರಿಕೆಗಳು ಅಗತ್ಯವಿರುವ ಕೃಷಿ ಉತ್ಪನ್ನಗಳನ್ನು ರೈತರಿಂದ ನೇರವಾಗಿ ಖರೀದಿಸುವಾಗ ಎ.ಪಿ.ಎಂ.ಸಿ. ಸೆಸ್ ಮನ್ನಾ ಮಾಡಲಾಗುವುದು. ಇದಕ್ಕಾಗಿ ಪ್ರಸ್ತುತ ಇರುವ ಕಾನೂನಿಗೆ ಅವಶ್ಯಕವಾದ ತಿದ್ದುಪಡಿಗಳನ್ನು ಸಹಕಾರ ಇಲಾಖೆಯು ತರುವುದು.

3.15 ಪ್ರಸ್ತುತ ಜಾಗತೀಕೃತ ಆರ್ಥಿಕ ವ್ಯವಸ್ಥೆಯಲ್ಲಿ ಸಣ್ಣ ಕೈಗಾರಿಕಾ ಕ್ಷೇತ್ರದ ಉಳಿವು, ಅವುಗಳ ಆಧುನೀಕರಣ, ಗುಣಮಟ್ಟ ವರ್ಧನೆ ಮತ್ತು ಸ್ಪರ್ಧಾತ್ಮಕ ಬೆಲೆ - ಈ ವಿಷಯಗಳ ಮೇಲೆ ಆಧಾರವಾಗಿರುತ್ತದೆ. ಈ ನಿಟ್ಟಿನಲ್ಲಿ

ಪ್ರವರ್ತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಲುವಾಗಿ ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್ತನ್ನು ಬಲಗೊಳಿಸಲಾಗುವುದು.

3.16 ಸ್ಥಳೀಯರಲ್ಲಿ ಉದ್ಯಮಶೀಲತೆಯನ್ನು ಅಭಿವೃದ್ಧಿಪಡಿಸಲು ಇರುವ ಸಂಸ್ಥೆಗಳನ್ನು ಪುನರ್ರಚನೆಗೊಳಿಸಿ, ಈ ನೀತಿಯ ಅವಧಿಯಲ್ಲಿ ಮೂರು ಲಕ್ಷ ಜನರಿಗೆ ಉದ್ಯಮಶೀಲತಾ ತರಬೇತಿ ನೀಡಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

3.17 ಹಿಂದುಳಿದ ಪ್ರದೇಶಗಳಲ್ಲಿ ಘಟಕಗಳನ್ನು ಸ್ಥಾಪಿಸುವ ಉದ್ಯಮದಾರರಿಗೆ ವಿಶೇಷ ರಿಯಾಯಿತಿಗಳನ್ನು ನೀಡಲಾಗುವುದು. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು, ಮಹಿಳೆಯರು, ಅಂಗವಿಕಲರು ಮತ್ತು ಮಾಜಿ ಸೈನಿಕರಿಗೆ ಘಟಕಗಳನ್ನು ಸ್ಥಾಪಿಸಲು ಹೆಚ್ಚುವರಿ ಉತ್ತೇಜನಗಳನ್ನು ನೀಡಲಾಗುವುದು.

3.18 ಕೈಗಾರಿಕೆಗಳ ವಸ್ತುಸ್ಥಿತಿ ಮತ್ತು ಅವುಗಳಿಗೆ ಬೇಕಾದ ಬೆಂಬಲ ಕ್ರಮಗಳನ್ನು ನಿರಂತರವಾಗಿ ತಿಳಿದುಕೊಳ್ಳಲು ಸರ್ಕಾರವು ಕೈಗಾರಿಕಾ ಸಂಸ್ಥೆಗಳು / ವಾಣಿಜ್ಯ ಮಂಡಳಿಗಳು / ವ್ಯಾಪಾರ ಸಂಸ್ಥೆಗಳೊಂದಿಗೆ ನಿಕಟವಾದ ಸಂಪರ್ಕವನ್ನು ಹೊಂದುವುದು.

3.19 ವಿಕೇಂದ್ರೀಕರಣ ಆಡಳಿತ ಕ್ರಮಗಳು ಮತ್ತು ದಕ್ಷತೆಯ ಅನುಕೂಲಕರ ವಾತಾವರಣವನ್ನು ಸೃಷ್ಟಿಸುವ ಮೂಲಕ ಬಂಡವಾಳ ಹೂಡಿಕೆ ಹಾಗೂ ವ್ಯಾಪಾರ ಪರಿಸರವನ್ನು ಸುಧಾರಿಸಲಾಗುವುದು.

3.20 ಕೈಗಾರಿಕೆಗಳಲ್ಲಿ ಉತ್ಪಾದನೆ ವೃದ್ಧಿಗೆ ಅನುಕೂಲವಾಗುವಂತೆ ಸರ್ಕಾರವು ಕಾರ್ಮಿಕ ಕಾನೂನುಗಳ ಸಮಗ್ರ ಪರಿಶೀಲನೆ ಮತ್ತು ವಿವಿಧ ನಿಯಮಗಳ ಸರಳೀಕರಣ ಕಾರ್ಯವನ್ನು ಕೈಗೊಳ್ಳುವುದು.

3.21 ರೋಗಗ್ರಸ್ಥ ಸಣ್ಣ ಕೈಗಾರಿಕಾ ಘಟಕಗಳು ಮತ್ತು ಬಿ.ಐ.ಎಫ್.ಆರ್. ಪ್ರಕರಣಗಳಿಗೆ ಸಂಬಂಧಿಸಿದಂತೆ ಕೈಗಾರಿಕಾ ಸಂಘಗಳು, ಹಣಕಾಸು ಸಂಸ್ಥೆಗಳು / ಬ್ಯಾಂಕುಗಳು, ಸೇವೆಯನ್ನು ಒದಗಿಸುವವರು / ಕಾರ್ಮಿಕ ಪ್ರತಿನಿಧಿಗಳು ಮೊದಲಾದವರೊಂದಿಗೆ ಸಮಾಲೋಚಿಸಿ ಪ್ರತ್ಯೇಕವಾದ ಪುನಶ್ಚೇತನ ಪ್ಯಾಕೇಜನ್ನು ಜಾರಿಗೊಳಿಸಲಾಗುವುದು.

3.22 ರಾಜ್ಯ ಮಟ್ಟದಲ್ಲಿ ಉತ್ತೇಜನಗಳು, ಕಾರ್ಮಿಕ ಕಾನೂನುಗಳ ವಿಚಾರಶೀಲನೆ ಮೊದಲಾದ ಸೌಲಭ್ಯಗಳನ್ನು ನೀಡಲು ಎಸ್.ಇ.ಝೆಡ್. ಕಾಯ್ದೆ 2005 ಮತ್ತು ನಿಯಮಗಳು 2006 (ಕೇಂದ್ರ ಕಾಯ್ದೆ)ಕ್ಕೆ ಸ್ಥಳೀಯವಾಗಿ ತಿದ್ದುಪಡಿಗಳನ್ನು ತರಲಾಗುವುದು.

3.23 ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಮಂಡಳಿ (BMRDA) ಯು ಬೆಂಗಳೂರು ಸುತ್ತಮುತ್ತಲಿನಲ್ಲಿ ಐದು ಟೌನ್‌ಶಿಪ್‌ಗಳನ್ನು ನಿರ್ಮಿಸುವ ಕಾರ್ಯವನ್ನು ಕೈಗೆತ್ತಿಕೊಂಡಿದೆ. ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಮಂಡಳಿಯ (BMRDA) ಯೋಜನೆ ಪ್ರಕಾರ ಈ ಟೌನ್‌ಶಿಪ್‌ಗಳಲ್ಲಿ ಕೈಗಾರಿಕಾ ಮೂಲಭೂತ ಸೌಕರ್ಯಗಳನ್ನು ಸೃಷ್ಟಿಸುವ ಮೂಲಕ ಆರ್ಥಿಕ ಚಟುವಟಿಕೆಗಳನ್ನು ಉತ್ತೇಜಿಸಲಾಗುವುದು.

3.24 ಜಿಲ್ಲಾ ಮಟ್ಟದಲ್ಲಿ ಸ್ವಯಂ ಉದ್ಯೋಗ ಕಾರ್ಯಕ್ರಮಗಳು ಮತ್ತು ಸ್ವಸಹಾಯ ಗುಂಪುಗಳ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು "ನೋಡಲ್ ಏಜೆನ್ಸಿ" ಯಾಗಿ ನೇಮಿಸಲಾಗುವುದು.

3.25 ಉದ್ಯಮದಾರರಿಗೆ ಅನುಕೂಲವಾಗುವ ದೃಷ್ಟಿಯಿಂದ ಎಲ್ಲಾ ಜಿಲ್ಲಾ ಕೈಗಾರಿಕಾ ಕೇಂದ್ರಗಳಲ್ಲಿ ಜಾಗತಿಕ ಮಾಹಿತಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

3.26 ಒಂದು ಲಕ್ಷ ವಿದ್ಯಾವಂತ ನಿರುದ್ಯೋಗಿ ಯುವಜನರಿಗೆ ಸ್ವಯಂ ಉದ್ಯೋಗ ಸ್ಥಾಪನೆ ಮತ್ತು ಮಜೂರಿ ಆಧಾರಿತ ಉದ್ಯೋಗ ಪಡೆಯಲು, ಕೈಗಾರಿಕೆಗೆ ಸಂಬಂಧಿಸಿದ ಕುಶಲತೆಯನ್ನು ಗುರುತಿಸಿ, ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

3.27 ಆಟೋಮೊಬೈಲ್ / ಮೆಷಿನ್ ಟೂಲ್ಸ್ / ಆಹಾರ ಸಂಸ್ಕರಣೆ / ಕಟ್ಟಡ ಸಾಮಗ್ರಿಗಳು ಮತ್ತು ಇತರೆ ಕ್ಷೇತ್ರಗಳಲ್ಲಿ ವಿವಿಧ ಸಂಸ್ಥೆಗಳ ನೈಪುಣ್ಯತೆ ಕೇಂದ್ರಗಳನ್ನು ಸ್ಥಾಪಿಸಲು ಹಾಗೂ ಈ ಕ್ಷೇತ್ರಗಳಲ್ಲಿ ಟೆಕ್ನಾಲಜಿ ಬ್ಯುಸಿನೆಸ್ ಇನ್‌ಕ್ಯುಬೇಟರ್‌ಗಳನ್ನು ಸ್ಥಾಪಿಸುವ ಸಲುವಾಗಿ ಸರ್ಕಾರವು ಉತ್ತೇಜನ ನೀಡುವುದು. ಇದಕ್ಕಾಗಿ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ ಪ್ರತಿ ಇನ್‌ಕ್ಯುಬೇಟರ್ / ಕೇಂದ್ರಕ್ಕೆ ಗರಿಷ್ಠ ರೂ.50 ಲಕ್ಷಗಳಿಗೆ ಮೀರದಂತೆ ಸರ್ಕಾರವು ಅನುದಾನವನ್ನು ನೀಡಲಾಗುವುದು.

3.28 ಪ್ರಸ್ತುತ ಕೈಗಾರಿಕೆಗಳು ಕೇಂದ್ರೀಕೃತವಾಗಿರುವ ಪ್ರದೇಶಗಳಲ್ಲಿ ನಾಗರೀಕ ಸೌಲಭ್ಯಗಳು ಮತ್ತು ಸೇವೆಗಳನ್ನು ದಕ್ಷತೆಯಿಂದ ನಿರ್ವಹಿಸುವ ಸಂಬಂಧವಾಗಿ ಅವುಗಳನ್ನು "ಕೈಗಾರಿಕಾ ಟೌನ್‌ಶಿಪ್" ಗಳಾಗಿ ಮಾರ್ಪಡಿಸಲಾಗುವುದು.

3.29 ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಡಾ: ಡಿ.ಎಂ. ನಂಜುಂಡಪ್ಪ ಸಮಿತಿ ವರದಿಯಲ್ಲಿ ಸೂಚಿಸಿರುವ ಅತಿ ಹೆಚ್ಚು ಮತ್ತು ಹೆಚ್ಚು ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಲಾದ 79 ತಾಲ್ಲೂಕುಗಳಲ್ಲಿ ಕೈಗಾರಿಕಾ ವಿಕಾಸ ಯೋಜನೆ ಅನುಷ್ಠಾನವನ್ನು ತ್ವರಿತಗೊಳಿಸಲಾಗುವುದು. ಈಗಾಗಲೇ ಈ ಯೋಜನೆಯ ಅನುಷ್ಠಾನಕ್ಕಾಗಿ ನೀಡಿರುವ ಸರ್ಕಾರಿ ಆದೇಶ ಸಂಖ್ಯೆ: ಸಿಐ 154 ಸಿಎಸ್‌ಸಿ 2005 ದಿನಾಂಕ 8-12-2005 ರ ಅಂಶಗಳನ್ನು ಈ ನೀತಿಯೊಂದಿಗೆ ಅಳವಡಿಸಿಕೊಳ್ಳಲಾಗುವುದು. ಈ ಯೋಜನೆಯಲ್ಲಿ ಸ್ಥಳೀಯ ಸಂಪನ್ಮೂಲಗಳು, ನೈಪುಣ್ಯತೆ ಮತ್ತು ಬೇಡಿಕೆ, ಬಳಕೆಗೆ ಸಿದ್ಧವಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ಮಾನವ ಸಂಪನ್ಮೂಲ ಅಭಿವೃದ್ಧಿ ಇತ್ಯಾದಿಗಳನ್ನು ಬಳಸಿಕೊಂಡು ನೂತನ ಆರ್ಥಿಕ ಅವಕಾಶಗಳ ಸೃಜನೆಯನ್ನು ನಿರೀಕ್ಷಿಸಲಾಗಿದೆ.

3.30 ಕೆ.ವಿ.ಐ.ಸಿ. / ಕೆ.ವಿ.ಐ.ಬಿ. ಗಳಿಂದ ಸಹಾಯ ಪಡೆದ ಖಾದಿ ಸಂಸ್ಥೆಗಳಿಗೆ ಸುಧಾರಿತ ಚರಕಗಳನ್ನು ಒದಗಿಸುವ ಮೂಲಕ ಉತ್ಪಾದಕತೆ ಹೆಚ್ಚಿಸಿ ಅದರಿಂದ ಕುಶಲಕರ್ಮಿಗಳ ಮಜೂರಿ ಗಳಿಕೆಯನ್ನು ಹೆಚ್ಚಿಸಲು ಅನುವು ಮಾಡಿಕೊಡಲಾಗುವುದು.

3.31 ಕರ್ನಾಟಕ ರಾಜ್ಯದ ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ಮತ್ತು ಪ್ರಸ್ತುತ ಬೆಳವಣಿಗೆಯನ್ನು ಕಾಯ್ದಿರಿಸುವ ಮತ್ತು ಅವುಗಳ ಹಿತರಕ್ಷಣೆಯನ್ನು ಕಾಪಾಡುವ ದೃಷ್ಟಿಯಿಂದ ಸರ್ಕಾರವು ರಾಜ್ಯದ ಸಣ್ಣ ಕೈಗಾರಿಕಾ ಘಟಕಗಳಿಗೆ ಶೇ. 15ರ ಬೆಲೆ ಆದ್ಯತೆ (price preference) ಸೌಲಭ್ಯವನ್ನು ಮತ್ತು ಸಣ್ಣ ಕೈಗಾರಿಕಾ ಘಟಕಗಳಿಂದ ಖರೀದಿಸುವ ಸಂದರ್ಭದಲ್ಲಿ, ಖರೀದಿ ಆದ್ಯತೆಯನ್ನು ಒದಗಿಸಲು ಬದ್ಧವಾಗಿರುತ್ತದೆ. ಈಗಾಗಲೇ 2001-06 ರ ನೀತಿಯಲ್ಲಿ ಒದಗಿಸಲಾಗಿರುವ ಈ ಉತ್ತೇಜನವನ್ನು ನೂತನ ಕೈಗಾರಿಕಾ ನೀತಿಯಲ್ಲಿಯೂ ಸಹ, ಮುಂದಿನ ಐದು ವರ್ಷಗಳವರೆಗೆ ವಿಸ್ತರಿಸಲಾಗುವುದು.

3.32 ಈ ನೀತಿಯ ಅವಧಿಯಲ್ಲಿ ನಿಗದಿಪಡಿಸಲಾಗಿರುವ ಶೇ. 20ರ ರಫ್ತು ಬೆಳವಣಿಗೆ ದರವನ್ನು ಸಾಧಿಸುವ ನಿಟ್ಟಿನಲ್ಲಿ ವಿಶ್ವೇಶ್ವರಯ್ಯ ಕೈಗಾರಿಕಾ ವ್ಯಾಪಾರ ಕೇಂದ್ರವನ್ನು (VITC) ಬಲಗೊಳಿಸಲಾಗುವುದು.

3.33 ವಿವಿಧ ಕೈಗಾರಿಕೆಗಳು ಮತ್ತು ಪ್ರದೇಶಗಳಿಗೆ ಒದಗಿಸಲಾಗುವ ಉತ್ತೇಜನಗಳು ಮತ್ತು ರಿಯಾಯಿತಿಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. ಈ ಉತ್ತೇಜನಗಳು ಮತ್ತು ರಿಯಾಯಿತಿಗಳಿಗೆ ಅನರ್ಹವಾದ ಚಟುವಟಿಕೆಗಳ ಪಟ್ಟಿಯನ್ನು ಅನುಬಂಧ-3 ರಲ್ಲಿ ನೀಡಲಾಗಿದೆ.

**4. ಕ್ರಿಯಾಯೋಜನೆ:**

4.1 ಅವಶ್ಯಕತೆಯಿರುವ ಸ್ಥಳಗಳಲ್ಲಿ ಕೆ.ಐ.ಡಿ.ಬಿ.ಯು 500 ಹಾಗೂ ಅದಕ್ಕಿಂತ ಹೆಚ್ಚು ಎಕರೆ ವಿಸ್ತೀರ್ಣ ಹೊಂದಿರುವ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಗಮನ ಹರಿಸುವುದು.

4.2 ಕೆ.ಐ.ಎ.ಡಿ.ಬಿ.ಯು ಹಾಸನ, ಮಂಗಳೂರು ಮತ್ತು ಶಿವಮೊಗ್ಗದಲ್ಲಿ ಕೈಗೆತ್ತಿಕೊಂಡಿರುವ ವಿಶೇಷ ಆರ್ಥಿಕ ವಲಯ (ಎಸ್.ಇ.ಝೆಡ್) ಯೋಜನೆಗಳನ್ನು ಪೂರ್ಣ ಗೊಳಿಸಲು ಕ್ರಮ ಕೈಗೊಳ್ಳುವುದು.

4.3 ಕೆ.ಐ.ಎ.ಡಿ.ಬಿ / ಕೆ.ಎಸ್.ಎಸ್.ಐ.ಡಿ.ಸಿ ಯು ಅನುಕ್ರಮವಾಗಿ ಅಭಿವೃದ್ಧಿ ಪಡಿಸಿರುವ ಕೈಗಾರಿಕಾ ಪ್ರದೇಶಗಳು / ವಸಾಹತುಗಳಲ್ಲಿ ಏಕಗಂಟಿನಲ್ಲಿ ಮೂಲಭೂತ ಸೌಕರ್ಯಗಳ ಉನ್ನತೀಕರಣವನ್ನು ಮಾಡುವುದು. ಸ್ಥಳೀಯ ಸಂಸ್ಥೆಗಳು ಮತ್ತು ಕೈಗಾರಿಕಾ ಸಂಘಗಳು ಇನ್ನು ಮುಂದೆ ಕೈಗಾರಿಕಾ ಪ್ರದೇಶಗಳ ವಸಾಹತುಗಳ ನಿರ್ವಹಣೆ ಮಾಡಲು ಮುಂದೆ ಬಂದಲ್ಲಿ ಮಾತ್ರ ಈ ಕಾರ್ಯಕ್ಕಾಗಿ ಕೆ.ಐ.ಎ.ಡಿ.ಬಿ./ಕೆ.ಎಸ್.ಎಸ್.ಐ.ಡಿ.ಸಿ.ಗೆ ಆರ್ಥಿಕ ಸಹಾಯವನ್ನು ಒದಗಿಸಲಾಗುವುದು. ಈ ಉದ್ದೇಶಕ್ಕಾಗಿ ರೂ.500 ಕೋಟಿಗಳ ಮೂಲಭೂತ ಸೌಕರ್ಯಗಳ ಉನ್ನತೀಕರಣ ನಿಧಿಯನ್ನು ಸ್ಥಾಪಿಸಲಾಗುವುದು.

4.4 ಕೆ.ಐ.ಎ.ಡಿ.ಬಿ. ವತಿಯಿಂದ ದೊಡ್ಡಬಳ್ಳಾಪುರದಲ್ಲಿ ಕೈಗೆತ್ತಿಕೊಳ್ಳಲಾಗಿರುವ ಸಿದ್ಧ ಉಡುಪುಗಳ ಪಾರ್ಕ್ ಮತ್ತು ಆನೇಕಲ್, ಬಳ್ಳಾರಿ, ದಾವಣಗೆರೆ, ಮೈಸೂರು, ಕನಕಪುರಗಳಲ್ಲಿ ಕೈಗೆತ್ತಿಕೊಳ್ಳಲಾಗಿರುವ ಸಮಗ್ರ ಜವಳಿ ಪಾರ್ಕ್‌ಗಳನ್ನು ಪೂರ್ಣಗೊಳಿಸಿ ಶೀಘ್ರದಲ್ಲಿಯೇ ಕಾರ್ಯಾರಂಭಗೊಳಿಸಲಾಗುವುದು.

4.5 ಮಾಲೂರು, ಬಾಗಲಕೋಟೆ, ಮದ್ದೂರು, ಹಿರಿಯೂರು, ಜೇವರ್ಗಿ ಮತ್ತು ಬೆಳಗಾವಿಯಲ್ಲಿ ಸ್ಥಾಪಿಸಲಾಗುವ ಆರು ಆಹಾರ ಪಾರ್ಕ್‌ಗಳ ಸ್ಥಾಪನಾ ಕಾರ್ಯವನ್ನು 2007ನೇ ವರ್ಷದ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.

4.6 ಭಾರತ ಸರ್ಕಾರದ ಆಹಾರ ಸಂಸ್ಕರಣಾ ಕೈಗಾರಿಕಾ ಸಚಿವಾಲಯವು ಹೊರತರಲಿರುವ 'ಬೃಹತ್ ಆಹಾರ ಪಾರ್ಕ್' ಯೋಜನೆ ಪರಿಕಲ್ಪನೆಯನ್ನು ಸರ್ಕಾರವು ಆಯ್ದ ಜಿಲ್ಲೆಗಳಲ್ಲಿ ಮೂಲಭೂತ ಸೌಕರ್ಯ, ಫಾರ್ವರ್ಡ್ ಮತ್ತು ಬ್ಯಾಕ್‌ವರ್ಡ್ ಲಿಂಕೇಜ್‌ಗಳ ವ್ಯವಸ್ಥೆಯನ್ನು ಕಲ್ಪಿಸುವುದರ ಮೂಲಕ ಅನುಷ್ಠಾನಗೊಳಿಸಲು ಅಳವಡಿಸುವುದು.

4.7 ಆಹಾರ ಸಂಸ್ಕರಣಾ ಕೈಗಾರಿಕೆಗಳ ತ್ವರಿತ ಅಭಿವೃದ್ಧಿಗೆ ಉತ್ತೇಜನ ನೀಡಲಾಗುವುದು. ಕರ್ನಾಟಕದಲ್ಲಿ 11 ಕೃಷಿ ವಾತಾವರಣ ವಲಯ (Agro-Climatic Zone) ಗಳಿದ್ದು, ಇವುಗಳಲ್ಲಿ ಬೇಳೆಕಾಳು, ಎಣ್ಣೆ ಬೀಜಗಳು, ಹಣ್ಣು ತರಕಾರಿಗಳು, ಸಾಂಬಾರು ಪದಾರ್ಥಗಳು, ಪುಷ್ಪಗಳು ಇತ್ಯಾದಿಗಳನ್ನು ಬೆಳೆಯಲು ಅನುಕೂಲವಾಗಿರುತ್ತದೆ. ಈ ಕೃಷಿ ಸಂಪನ್ಮೂಲಗಳು ರೈತರಿಗೆ, ಸಂಸ್ಕರಣಗಾರರಿಗೆ ಮತ್ತು ಬಳಕೆದಾರರಿಗೆ ಅನುಕೂಲವಾಗುವಂತೆ ಮಾಡಲು ಪೂರ್ಣ ಪ್ರಮಾಣದಲ್ಲಿ ಕ್ರಮ ಕೈಗೊಳ್ಳಲಾಗುವುದು.

4.8 ಕೃಷಿ ಉತ್ಪನ್ನಗಳನ್ನು ಸಂಸ್ಕರಣಗೊಳಿಸುವ ಕೈಗಾರಿಗಳು ರೈತರಿಂದ ಬೇಳೆಕಾಳುಗಳು, ಎಣ್ಣೆ ಬೀಜಗಳು, ಹಣ್ಣು ಮತ್ತು ತರಕಾರಿಗಳನ್ನು ಎ.ಪಿ.ಎಂ.ಸಿ. ಮೂಲಕ ಹೋಗದೆ ನೇರವಾಗಿ ಪಡೆದುಕೊಳ್ಳಲು ಅನುಮತಿ ನೀಡಲಾಗುವುದು.

ಈ ರೀತಿಯಲ್ಲಿ ಸಂಸ್ಕರಣಗೊಳಿಸುವ ಕೈಗಾರಿಕೆಗಳು ಖರೀದಿಸಿದ ಪದಾರ್ಥಗಳ ಮೇಲೆ ಎ.ಪಿ.ಎಂ.ಸಿ. ಮೇಲು ತೆರಿಗೆಯನ್ನು (ಸೆಸ್) ಮನ್ನಾ ಮಾಡಲಾಗುವುದು.

4.9 ಅತಿ ಸಣ್ಣ / ಸಣ್ಣ ಕೈಗಾರಿಕೆಗಳ ಲಾಭಕ್ಕಾಗಿ ಅವಕಾಶ ಹೊಂದಿರುವ ತಾಲ್ಲೂಕುಗಳಲ್ಲಿ 25 ಸಮೂಹ (ಕ್ಲಸ್ಟರ್) ಗಳನ್ನು ಕೆ.ಎಸ್.ಎಸ್.ಐ.ಡಿ.ಸಿ. ವತಿಯಿಂದ ಅಭಿವೃದ್ಧಿಗೊಳಿಸಿ, 2007-08ನೇ ಸಾಲಿನ ಒಳಗಾಗಿ ಪೂರ್ಣಗೊಳಿಸಲಾಗುವುದು.

4.10 ಖಾಸಗಿ ಕ್ಷೇತ್ರದ ಉದ್ಯಮದಾರರು ಅವಕಾಶವಿರುವ ಸ್ಥಳಗಳಲ್ಲಿ ಬಹುಪದಾರ್ಥ, ಏಕ ಪದಾರ್ಥ, ನಿರ್ದಿಷ್ಟ ಕ್ಷೇತ್ರ ಮತ್ತು ಮುಕ್ತ ವ್ಯಾಪಾರ ವಲಯಗಳನ್ನು ಸ್ಥಾಪಿಸಲು ಉತ್ತೇಜನ ನೀಡಲಾಗುವುದು ಮತ್ತು ಅವಶ್ಯಕವಿರುವ ಮೂಲಭೂತ ಸೌಕರ್ಯ ಬೆಂಬಲವನ್ನು ಕೆ.ಐ.ಎ.ಡಿ.ಬಿ. ಯು ನೀಡುವುದು.

4.11 (1) ಬೆಂಗಳೂರು-ಮೈಸೂರು; (2)ಮೈಸೂರು-ನಂಜನಗೂಡು; (3) ಹುಬ್ಬಳ್ಳಿ-ಬೆಳಗಾವಿ; (4) ಹೊಸಪೇಟೆ-ಬಳ್ಳಾರಿ; (5) ಮಂಗಳೂರು-ಉಡುಪಿ; (6) ಭದ್ರಾವತಿ-ಶಿವಮೊಗ್ಗ; (7) ನೆಲಮಂಗಲ-ಕುಣಿಗಲ್; (8) ದಾವಣಗೆರೆ-ಹರಿಹರ ಮತ್ತು (9) ಕೋಲಾರ-ಕೆ.ಜಿ.ಎಫ್.

ಮೊದಲಾದ ಅವಕಾಶವಿರುವ ಸ್ಥಳಗಳಲ್ಲಿ ಕೈಗಾರಿಕಾ ಕಾರಿಡಾರ್ / ಸಮೂಹಗಳ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಲಾಗುವುದು.

4.12 ಮಾನವ ಸಂಪನ್ಮೂಲ ಅಭಿವೃದ್ಧಿ: ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಕೃಷಿ ಮತ್ತು ತೋಟಗಾರಿಕೆಯ ಪ್ರತಿನಿಧಿಗಳು, ಹಾಗೂ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ / ಕೃಷಿ ವಿಶ್ವವಿದ್ಯಾಲಯ ಗಳ ಉಪಕುಲಪತಿಗಳು ಮತ್ತು ಇತರರನ್ನು ಒಳಗೊಂಡ ವಿವಿಧ ಕೈಗಾರಿಕೆಗಳಿಗೆ ಬೇಕಾದ ಮಾನವ ಸಂಪನ್ಮೂಲ ಅಭಿವೃದ್ಧಿ / ಕೌಶಲ್ಯ ಉನ್ನತೀಕರಣ ಬಗ್ಗೆ ವಿವಿಧ ಯೋಜನೆಗಳನ್ನು ತಯಾರಿಸಲು ಒಂದು ಉಚ್ಛಮಟ್ಟದ ಸಮಿತಿಯನ್ನು ರಚಿಸಲಾಗುವುದು. ಮಾನವ ಸಂಪನ್ಮೂಲ ಅಭಿವೃದ್ಧಿ ಉದ್ದೇಶಕ್ಕಾಗಿ ರೂ.25 ಕೋಟಿಗಳನ್ನು ತೆಗೆದಿರಿಸಲಾಗುವುದು.

4.13 ಮುಂಬರುವ ದಿನಗಳಲ್ಲಿ ಬೇಡಿಕೆಯಿರುವ ರಿಟೈಲ್ ವ್ಯಾಪಾರ, ಸಿದ್ಧ ಉಡುಪುಗಳು ಮತ್ತು ಜವಳಿ, ಕಟ್ಟಡ ನಿರ್ಮಾಣ, ಅರ್ತ್‌ಮೂವಿಂಗ್ ಉಪಕರಣಗಳ ರಿಪೇರಿ ಮತ್ತು ಸೇವೆ ಇತ್ಯಾದಿಗಳಿಗೆ ಮಾನವ ಸಂಪನ್ಮೂಲ ತರಬೇತಿ ಸಂಸ್ಥೆಗಳನ್ನು ಖಾಸಗಿ ಕ್ಷೇತ್ರದ ಸಹಭಾಗಿತ್ವದೊಂದಿಗೆ 'ಪಿ.ಪಿ.ಪಿ' ಮಾದರಿಯಲ್ಲಿ ಸ್ಥಾಪಿಸಲಾಗುವುದು.

4.14 ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಮತ್ತು ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಸಚಿವರ ಉಪಾಧ್ಯಕ್ಷತೆಯಲ್ಲಿ ಕೈಗಾರಿಕೆಗಳ ಪ್ರಮುಖರು, ವಾಣಿಜ್ಯ ಮತ್ತು ಕೈಗಾರಿಕೆ ಮಂಡಳಿಗಳು / ವ್ಯಾಪಾರ ಸಂಘಟನೆಗಳ ಮುಖ್ಯಸ್ಥರು ಸದಸ್ಯರಾಗಿರುವ ರಾಜ್ಯ ಮಟ್ಟದ ಕೈಗಾರಿಕಾಭಿವೃದ್ಧಿ ಪರಿಷತ್ತನ್ನು ರಚಿಸಲಾಗುವುದು. ಈ ಸಮಿತಿಯು ರಾಜ್ಯದಲ್ಲಿ ಕೈಗಾರಿಕಾಭಿವೃದ್ಧಿ ಮತ್ತು ಬಂಡವಾಳ ಹೂಡಿಕೆ ಪ್ರವರ್ತನೆಗೆ ಸಂಬಂಧಿಸಿದಂತೆ ಸೂಕ್ತ ಮಾಹಿತಿ ಹಾಗೂ ಸಲಹೆಗಳನ್ನು ಸರ್ಕಾರಕ್ಕೆ ನೀಡಲಿದೆ.

4.15 ಭೌತಿಕ ಮೂಲಭೂತ ಸೌಕರ್ಯಗಳು, ತೆರಿಗೆಗಳು/ಹಣಕಾಸಿನ ಉತ್ತೇಜನಗಳು ಅಲ್ಲದೆ ಯೋಜನೆಗಳು ನಿಗದಿತ ಅವಧಿಯಲ್ಲಿ ಅನುಷ್ಠಾನಗೊಳಿಸಿ, ಪ್ರಾರಂಭಿಸಲು ನಿಯಮಗಳ ಸರಳೀಕರಣ ಮತ್ತು ವ್ಯವಹಾರವನ್ನು ಸರಳವಾಗಿ ನಡೆಸುವ ವ್ಯವಸ್ಥೆ ಅತ್ಯಗತ್ಯ. ಕರ್ನಾಟಕ ಕೈಗಾರಿಕಾ (ಸೌಲಭ್ಯ) ಅಧಿನಿಯಮ 2002 ಮತ್ತು ನಿಯಮಗಳು 2003ನ್ನು ಉದ್ಯಮದಾರರಿಗೆ ಹೆಚ್ಚು ದಕ್ಷತೆಯಿಂದ ಸೇವೆಯನ್ನು ಒದಗಿಸಲು ಅನುಕೂಲವಾಗುವಂತೆ ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸಲಾಗುವುದು.

4.16 ಬಂಡವಾಳ ಹೂಡಿಕೆಯ ಪ್ರವರ್ತನೆಗೆ ಮತ್ತು ಹೂಡಿಕೆದಾರರು ತಮ್ಮ ಯೋಜನೆಗಳನ್ನು ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸಲು ಅನುಕೂಲ ಮಾಡಿಕೊಡುವಲ್ಲಿ, ಕರ್ನಾಟಕ ಉದ್ಯೋಗ ಮಿತ್ರವು ಪ್ರಭಾವಪೂರ್ಣ ಪಾತ್ರವನ್ನು ವಹಿಸಲು ಸಾಧ್ಯವಾಗಿಸಲು ಈ ಸಂಸ್ಥೆಯನ್ನು ಸಶಕ್ತಗೊಳಿಸಲಾಗುವುದು.

4.17 ಕೈಗಾರಿಕಾ ವಿಕಾಸ ಯೋಜನೆಯಡಿಯಲ್ಲಿ ಜಿ.ಟಿ.ಟಿ.ಸಿ.ಯಿಂದ ಟೂಲ್ ಮತ್ತು ಡೈ ಮೇಕಿಂಗ್ ಚಟುವಟಿಕೆಗಳಿಗೆ ಹೆಚ್ಚಿನ ಉಪಕೇಂದ್ರಗಳ ಸ್ಥಾಪನೆ, ವಿವಿಧ ನಿಗಮ ಮತ್ತು ಮಂಡಳಿಗಳ ಕ್ಷೇತ್ರವಾರು ಯೋಜನೆಗಳ ಅನುಷ್ಠಾನ, ಉದ್ಯಮಶೀಲರ ಅಭಿವೃದ್ಧಿ ಕಾರ್ಯಕ್ರಮಗಳು/ತಾಲ್ಲೂಕುಗಳ ಸಂಪನ್ಮೂಲಗಳ ವರದಿ ತಯಾರಿಸುವುದು, ಇತರೆ ಇಲಾಖೆಗಳ ವಿವಿಧ ಯೋಜನಗಳಡಿಯಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಆಧರಿಸಿ ಕೈಗಾರಿಕಾ ಮೂಲಭೂತ ಸೌಕರ್ಯಗಳ ಉನ್ನತೀಕರಣ/ಹೊಸದಾಗಿ ಸ್ಥಾಪನೆ ಮೊದಲಾದ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲಾಗುವುದು. ನಿಗಮ/ ಮಂಡಳಿಗಳು ಅನುಷ್ಠಾನಗೊಳಿಸುವ ಯೋಜನೆಗಳಿಗೆ ಹಣಕಾಸು ಸೌಲಭ್ಯಗಳನ್ನು ಒದಗಿಸಲಾಗುವುದು.

4.18 ಕೆ.ವಿ.ಐ.ಸಿ/ಕೆ.ವಿ.ಐ.ಬಿ ಮುಖಾಂತರ ಸಹಾಯವನ್ನು ಪಡೆಯುವ ವಿವಿಧ ಖಾದಿ ಸಂಸ್ಥೆಗಳ ಮೂಲಕ ಪ್ರಸ್ತುತ ಇರುವ ಆರು ಸ್ಪಿಂಡಲ್ ಚರಕಗಳನ್ನು ಎಂಟು ಸ್ಪಿಂಡಲ್‌ಗಳ ಸುಧಾರಿತ ಚರಕಗಳಿಗೆ ಸಬ್ಸಿಡೈಸ್ಡ್ ದರದಲ್ಲಿ ಹಂತ-ಹಂತವಾಗಿ ಬದಲಿಸಲಾಗುವುದು. ಇದರಿಂದಾಗಿ ಕುಶಲಕರ್ಮಿಗಳ ಉತ್ಪಾದಕತೆ ಮತ್ತು ಮಜೂರಿಗಳಿಕೆ ಸಾಮರ್ಥ್ಯ ಹೆಚ್ಚಾಗಲಿದೆ.

**5 ನಿಬಂಧನೆ ಮತ್ತು ಷರತ್ತುಗಳು:**

5.1 ಈ ನೀತಿಯನ್ವಯ ಲಭ್ಯವಾಗುವ ಉತ್ತೇಜನಗಳು ಮತ್ತು ರಿಯಾಯಿತಿಗಳು ದಿನಾಂಕ 1-4-2006 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುತ್ತವೆ. ಆದರೂ, ಈ ಹಿಂದಿನ ನೀತಿಗಳ ಪ್ಯಾಕೇಜ್ ಅನ್ವಯ ನೀಡಲಾಗಿರುವ ಉತ್ತೇಜನ ಮತ್ತು ರಿಯಾಯಿತಿಗಳಿಗೆ, ಸಂಬಂಧಿಸಿದ ಕೈಗಾರಿಕಾ ಘಟಕಗಳಿಗೆ ಈ ಹಿಂದೆ ನೀಡಿದ ಮಂಜೂರಾತಿ ಆದೇಶಗಳು ಕೊನೆಗೊಳ್ಳುವವರೆಗೆ ಲಭ್ಯವಿರುತ್ತವೆ. ದಿನಾಂಕ 1-4-2006ರ ನಂತರ ಹೂಡಲಾದ ಎಲ್ಲಾ ಬಂಡವಾಳ ಹೂಡಿಕೆಗಳು ಈ ನೀತಿಯ ವ್ಯಾಪ್ತಿಯಲ್ಲಿ ಬರುತ್ತವೆ.

5.2 ಅರ್ಹವಾಗಿರುವ ಕೈಗಾರಿಕಾ ಘಟಕಗಳು, ಸ್ಥಿರಾಸ್ತಿಗಳ ಮೇಲೆ ಹೂಡಲಾಗುವ ಹೊಸ ಬಂಡವಾಳದ ಮೇಲೆ ಮಾತ್ರ ಉತ್ತೇಜನಗಳು ಮತ್ತು ರಿಯಾಯಿತಿಗಳನ್ನು ಪಡೆಯಲು ಅವಕಾಶವಿದೆ. ಬೇರೆಯವರಿಂದ ವಶಕ್ಕೆ ತೆಗೆದುಕೊಂಡಿರುವ ಕೈಗಾರಿಕಾ ಘಟಕಗಳು ಅಥವಾ ಆಸ್ತಿಗಳ ಮೇಲೆ ಹೂಡಲಾಗಿರುವ ಬಂಡವಾಳಗಳ ಮೇಲೆ ಉತ್ತೇಜನಗಳನ್ನು ಪಡೆಯಲು ಅರ್ಹವಿರುವುದಿಲ್ಲ. ಆದರೆ ನೂತನ ಉದ್ಯಮಿಯು ಹೊಸ ಘಟಕಗಳು/ವಿಸ್ತರಣೆ ಕಾರ್ಯಕ್ರಮದಡಿಯಲ್ಲಿ ಹೂಡುವ ಹೆಚ್ಚುವರಿ ಬಂಡವಾಳದ ಮೇಲೆ ಉತ್ತೇಜನಗಳನ್ನು ಪಡೆಯಲು ಅರ್ಹವಿರುತ್ತದೆ.

5.3 ಸರಕಾರಿ ಆದೇಶ 'ಮಾಹಿತಿ'ಯ ಅನ್ವಯ "ಐಟಿ ನೀತಿ" ಮತ್ತು "ಬಯೋಟೆಕ್ನಾಲಜಿ ನೀತಿ"ಯನ್ವಯ ಮಾಹಿತಿ ತಂತ್ರಜ್ಞಾನ / ಜೈವಿಕ ತಂತ್ರಜ್ಞಾನ ಕ್ಷೇತ್ರಕ್ಕೆ ಲಭಿಸುವ ಉತ್ತೇಜನ ಮತ್ತು ರಿಯಾಯಿತಿಗಳು ಮುಂದುವರಿಯುತ್ತವೆ.

5.4 ಅನುಬಂಧ-ಡಿ ಯಲ್ಲಿ ನಮೂದಿಸಿರುವ ಕೈಗಾರಿಕಾ ಚಟುವಟಿಕೆಗಳು ಈ ನೀತಿಯಲ್ಲಿ ಹೇಳಿರುವ ಉತ್ತೇಜನ ಮತ್ತು ರಿಯಾಯಿತಿಗಳಿಗೆ ಅನರ್ಹವಾಗಿವೆ.

55 **ಪರಿಭಾಷೆ**

(ಎ) **ಅತೀ ಸಣ್ಣ ಕೈಗಾರಿಕೆಗಳು**: ಅತೀ ಸಣ್ಣ ಪ್ರಮಾಣದ ಕೈಗಾರಿಕೆಯೆಂದರೆ, ಸ್ಥಾವರ ಮತ್ತು ಯಂತ್ರೋಪಕರಣಗಳಲ್ಲಿ ರೂ. 25 ಲಕ್ಷ ಗಳಿಗಿಂತ ಕಡಿಮೆ ಬಂಡವಾಳ ಹೂಡಿರುವಂತಹ ಕೈಗಾರಿಕೆ. ಇವುಗಳಿಗೆ ಯಾವುದೇ ಪ್ರದೇಶ ನಿರ್ಬಂಧವಿರುವುದಿಲ್ಲ.

(ಬಿ) **ಸಣ್ಣ ಪ್ರಮಾಣದ ಕೈಗಾರಿಕೆಗಳು**: ಸಣ್ಣ ಪ್ರಮಾಣದ ಕೈಗಾರಿಕೆಯು ಸ್ವಂತವಾಗಿ ಅಥವಾ ಲೀಸ್‌ನ ಮೇಲೆ ಅಥವಾ ಹೈರ್ ಪರ್ಚೇಸ್ ಷರತ್ತಿನಲ್ಲಿ ಹೊಂದಿರುವ ಸ್ಥಾವರ ಮತ್ತು ಯಂತ್ರೋಪಕರಣಗಳಲ್ಲಿ ರೂ.100 ಲಕ್ಷಗಳಿಗಿಂತ ಕಡಿಮೆ ಬಂಡವಾಳ ಹೂಡಿರುವಂತಹ ಒಂದು ಘಟಕ.

(ಸಿ) **ಮಧ್ಯಮ ಮತ್ತು ಬೃಹತ್ ಕೈಗಾರಿಕೆಗಳು**: ಅತಿ ಸಣ್ಣ/ಸಣ್ಣ ಪ್ರಮಾಣದ ಕೈಗಾರಿಕೆಗಳೆಂದು ವರ್ಗೀಕರಿಸಲ್ಪಡದ ಎಲ್ಲಾ ಕೈಗಾರಿಕೆಗಳನ್ನು ಮಧ್ಯಮ / ಬೃಹತ್ ಕೈಗಾರಿಕೆಗಳೆಂದು ವರ್ಗೀಕರಿಸಲಾಗುವುದು.

(ಡಿ) **ಶೇಕಡ 100ರಷ್ಟು ರಫ್ತು ಆಧಾರಿತ ಕೈಗಾರಿಕೆಗಳು**: ಶೇಕಡಾ 100ರಷ್ಟು ರಫ್ತು ಆಧಾರಿತ ಉದ್ಯಮವೆಂದರೆ, (ಭಾರತ ಸರ್ಕಾರ ಕಾಲಕಾಲಕ್ಕೆ ಅನುಮತಿ ನೀಡುವಂತೆ) ಉತ್ಪಾದಿಸಿದ ಎಲ್ಲಾ ಉತ್ಪನ್ನಗಳನ್ನು ಅಥವಾ ಕೇಂದ್ರಸರ್ಕಾರ ಕಾಲಕಾಲಕ್ಕೆ ನೀಡುವ ಮಾರ್ಗ ಸೂಚಿಯಂತೆ ಅಥವಾ ಪರಿಭಾಷೆಗನುಗುಣವಾದ ಪ್ರಮಾಣದಲ್ಲಿ ರಫ್ತು ಮಾಡುವುದಾಗಿ ಒಪ್ಪಿಕೊಂಡುರುವಂತಹ ಒಂದು ಉದ್ಯಮ. ಇಂತಹ ಉದ್ಯಮಗಳನ್ನು ರಫ್ತು ಆಧಾರಿತ ಘಟಕ (ಇ.ಒ.ಯು.) ಯೋಜನೆಯಡಿಯಲ್ಲಿ ಅಥವಾ ಎಕ್ಸ್‌ಪೋರ್ಟ್ ಪ್ರಮೋಷನ್ ಇಂಡಸ್ಟ್ರಿಯಲ್ ಪಾರ್ಕ್ ಯೋಜನೆಯಡಿಯಲ್ಲಿ ಅಥವಾ ಎಲೆಕ್ಟ್ರಾನಿಕ್ಸ್ ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್ (ಇ.ಹೆಚ್.ಟಿ.ಪಿ.) ಯೋಜನೆಯಡಿಯಲ್ಲಿ ಅಥವಾ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಯೋಜನೆಯಡಿಯಲ್ಲಿ ಅಥವಾ ಸ್ಪೆಷಲ್ ಇಕಾನಾಮಿಕ್ ಝೋನ್ ಯೋಜನೆಯಡಿಯಲ್ಲಿ ಪ್ರಾರಂಭಿಸಬಹುದಾಗಿದೆ.

(ಇ) **ಬೃಹತ್ ಯೋಜನೆ**: ಬೃಹತ್ ಯೋಜನೆಯೆಂದರೆ ಸ್ಥಿರಾಸ್ತಿಯಲ್ಲಿ ರೂ. 100 ಕೋಟಿಗಳಿಗಿಂತ ಹೆಚ್ಚಿನ ಬಂಡವಾಳ ಹೂಡುವ ಯೋಜನೆಯಾಗಿರುತ್ತದೆ.

(ಎಫ್) **ಸ್ಥಿರಾಸ್ತಿ**: ಸ್ಥಿರಾಸ್ತಿ ಎಂದರೆ ಭೂಮಿ, ಕಟ್ಟಡ ಹಾಗೂ ಯಂತ್ರ ಮತ್ತು ಸ್ಥಾವರದ ಮೇಲೆ ಹಾಗೂ ಟೂಲ್ಸ್, ಜಿಗ್ಸ್ & ಫಿಕ್ಚರ್ಸ್, ಡೈಸ್, ಬಾಯ್ಲರ್, ಕಂಪ್ರೆಸ್ಸರ್ಸ್, ಡೀಸೆಲ್ ಜನರೇಟಿಂಗ್ ಸೆಟ್ಸ್, ಕ್ರೇನ್ಸ್, ಮೆಟೀರಿಯಲ್ ಹ್ಯಾಂಡ್ಲಿಂಗ್ ಇಕ್ವಿಪ್‌ಮೆಂಟ್ ಮತ್ತು ಉತ್ಪಾದನಾ ಉದ್ದೇಶದಲ್ಲಿ ನೇರವಾಗಿ ಸಂಬಂಧಿಸಿದ ಇಂತಹ ಇತರ ಉಪಕರಣಗಳ ಮೇಲೆ ಹೂಡಿದ ಒಟ್ಟು ಬಂಡವಾಳ ಆಗಿರುತ್ತದೆ.

56 ಉತ್ತೇಜನ ಮತ್ತು ರಿಯಾಯಿತಿಗಳನ್ನು ಈ ಕೆಳಗಿನ ನಿಬಂಧನೆ ಮತ್ತು ಷರತ್ತುಗಳಿಗೆ ಅನುಗುಣವಾಗಿ ಮಂಜೂರು ಮಾಡಲಾಗುವುದು:

(ಎ) ಎಲ್ಲಾ ಹೊಸ ಕೈಗಾರಿಕಾ ಬಂಡವಾಳ ಹೂಡಿಕೆಯು ಸಾಧ್ಯವಿರುವಷ್ಟು ಗರಿಷ್ಠ ಸಂಖ್ಯೆಯಲ್ಲಿ ಹೆಚ್ಚುವರಿ ಉದ್ಯೋಗಾವಕಾಶಗಳನ್ನು ಕಲ್ಪಿಸಬೇಕಲ್ಲದೇ, ಕನಿಷ್ಟ ಶೇ. 80 ರಷ್ಟು ಉದ್ಯೋಗವನ್ನು ಸ್ಥಳೀಯ ಜನರಿಗೆ ನೀಡತಕ್ಕದ್ದು. (ಸಿ ಮತ್ತು ಡಿ ಪ್ರವರ್ಗಗಳ ವಿಷಯದಲ್ಲಿ ಶೇ. 100 ರಷ್ಟು ಉದ್ಯೋಗಾವಕಾಶವನ್ನು ಸ್ಥಳೀಯ ಜನರಿಗೆ ನೀಡಬೇಕು) ಹಾಗೂ ಉತ್ತೇಜನಗಳನ್ನು ವಿತರಣೆ ಮಾಡುವಾಗ ಈ ವಿಚಾರದ ಮೇಲ್ವಿಚಾರಣೆ ನೋಡಿಕೊಳ್ಳತಕ್ಕದ್ದು.

ಸ್ಥಳೀಯ ಜನರಿಗೆ ಉದ್ಯೋಗ ನೀಡುವ ಅವಶ್ಯಕತೆಯನ್ನು ಜಿಲ್ಲಾ ಕೈಗಾರಿಕಾ ಕೇಂದ್ರಗಳು ಐದು ವರ್ಷಗಳವರೆಗೆ ಮೇಲ್ವಿಚಾರಣೆ ಮಾಡುತ್ತವೆ. ಕೈಗಾರಿಕೆಗಳು ಸ್ಥಳೀಯ ಜನರಿಗೆ ಮೇಲೆ ತಿಳಿಸಿದ ನಿಬಂಧನೆಗನುಸಾರವಾಗಿ ಉದ್ಯೋಗ ನೀಡಲು ತಪ್ಪಿದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಅಧ್ಯಕ್ಷರಾಗಿರುವ ರಾಜ್ಯ ಮಟ್ಟದ ಸಮಿತಿಗೆ ತಿಳಿಸಲಾಗುವುದು ಹಾಗೂ ಈ ಸಮಿತಿಯು ಮಂಜೂರಾದ ಬಂಡವಾಳ ಸಹಾಯಧನವನ್ನು ಮರುವಸೂಲಿ ಮಾಡಲು ಶಿಫಾರಸ್ಸು ಮಾಡುವುದು. ಇದಕ್ಕಾಗಿ ಸಹಾಯಧನವನ್ನು ವಿತರಣೆ ಮಾಡುವ ಮೊದಲು ಘಟಕಗಳಿಂದ ಮುಚ್ಚಳಿಕೆಯೊಂದನ್ನು ಪಡೆಯಲಾಗುವುದು.

(ಬಿ) ಬಂಡವಾಳ ಸಹಾಯಧನ ಮೊತ್ತವನ್ನು ಕಂಡಿಕೆ 5.5ರ ಉಪಕಂಡಿಕೆ (ಎಫ್)ನಲ್ಲಿ ತಿಳಿಸಿರುವಂತೆ ಸ್ಥಿರಾಸ್ತಿಯ ಮೌಲ್ಯದ ಆಧಾರದ ಮೇಲೆ ಮತ್ತು ಉದ್ಯಮಶೀಲರು ಆರ್ಥಿಕ ಸಾಲ ಪಡೆದ ಹಣಕಾಸು ಸಂಸ್ಥೆಗಳು / ವಾಣಿಜ್ಯ ಬ್ಯಾಂಕುಗಳಿಂದ ಅನುಮೋದನೆ ಮಾಡಲ್ಪಟ್ಟ ಆಧಾರದ ಮೇಲೆ ಲೆಕ್ಕಾಚಾರ ಮಾಡಲಾಗುವುದು.

(ಸಿ) ಮೇಲೆ ನೀಡಿರುವ ಅತಿಸಣ್ಣ, ಸಣ್ಣ ಅಥವಾ ಮಧ್ಯಮ ಮತ್ತು ಬೃಹತ್ ಕೈಗಾರಿಕೆಗಳ ಪರಿಭಾಷೆಯು, ಭಾರತ ಸರ್ಕಾರವು ಈ ಪರಿಭಾಷೆಗಳನ್ನು ಪರಿಷ್ಕರಿಸಿದಾಗಲೆಲ್ಲ ತಾನಾಗಿಯೇ ಪರಿಷ್ಕೃತವಾಗುತ್ತದೆ ಹಾಗೂ ಈ ಆದೇಶದಲ್ಲಿ ತಿಳಿಸಿರುವ ಎಲ್ಲಾ ರಿಯಾಯಿತಿಗಳು ಅಂತಹ ದಿನಾಂಕದಿಂದ ಹೊಸ ಪರಿಭಾಷೆಯ ವ್ಯಾಪ್ತಿಯಲ್ಲಿ ಬರುವ ಘಟಕಗಳಿಗೂ ಲಭಿಸುತ್ತವೆ.

(ಡಿ) ಈ ಸರ್ಕಾರಿ ಆದೇಶದನ್ವಯ ನಿಡಲಾಗುವ ರಿಯಾಯಿತಿ ಮತ್ತು ಉತ್ತೇಜನಗಳು ದಿನಾಂಕ 1.4.2006 ರಿಂದ ಮುಂದಿನ ಐದು ವರ್ಷಗಳ ಅವಧಿಯವರೆಗೆ (ಅಂದರೆ 31.3.2011 ರವರೆಗೆ) ಊರ್ಜಿತ ವಾಗಿರುವುದು.

(ಇ) ಯಾವುದೇ ಕೈಗಾರಿಕಾ ಘಟಕವು ಸರ್ಕಾರ / ಭಾರತ ಸರ್ಕಾರದ ಯಾವುದೇ ಯೋಜನೆಗಳಡಿಯಲ್ಲಿ ಸಹಾಯಧನವನ್ನು ಪಡೆದುಕೊಂಡಲ್ಲಿ, ಬಾಕಿ ವ್ಯತ್ಯಾಸವಿರುವ ಸಹಾಯಧನದ ಮೊತ್ತವನ್ನು ಮಾತ್ರ ಈ ನೀತಿಯನ್ವಯ ನೀಡಲಾಗುವುದು.

(ಎಫ್) ಈ ಕೈಗಾರಿಕಾ ನೀತಿಯಲ್ಲಿ ಉಲ್ಲೇಖಿಸಿರುವ ಉತ್ತೇಜನ ಮತ್ತು ರಿಯಾಯಿತಿಗಳ ಪ್ಯಾಕೇಜನ್ನು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಕಾರ್ಯಾಚರಣೆಗೆ ತರುವುದು. ಈ ಉತ್ತೇಜನ ರಿಯಾಯಿತಿಗಳ ಕಾರ್ಯಾಚರಣೆಗೆ ಮಾರ್ಗಸೂಚಿ ಅಂಶಗಳನ್ನು ಸಂಬಂಧಪಟ್ಟ ಸಂಸ್ಥೆ ಮತ್ತು ಅಧಿಕಾರಿಗಳಿಗೆ ಪ್ರತ್ಯೇಕವಾಗಿ ನೀಡಲಾಗುವುದು. ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ನೀಡುವ ವ್ಯಾಖ್ಯಾನ ಹಾಗೂ ಆ ಪ್ರಕಾರ ತೆಗೆದುಕೊಂಡ ನಿರ್ಣಯಗಳು ಅಂತಿಮವಾಗಿರುತ್ತವೆ.

ಅನುಬಂಧ 'ಚ'

## ವಿವಿಧ ಪ್ರಮಾಣದಲ್ಲಿ ಉತ್ತೇಜನ ಮತ್ತು ರಿಯಾಯಿತಿಗಳನ್ನು ಕಾರ್ಯಾಚರಣೆಗೆ ತರಲು ಕರ್ನಾಟಕದ ತಾಲ್ಲೂಕುಗಳ ವಲಯವಾರು ವರ್ಗೀಕರಣ

| ಕ್ರ ಸಂ. | ಜಿಲ್ಲೆ | ಒಟ್ಟು ತಾಲ್ಲೂಕು-ಗಳ ಸಂಖ್ಯೆ | ವಲಯ - 1 | | ವಲಯ - 2 | ವಲಯ - 3 |
|---|---|---|---|---|---|---|
| | | | ಅತೀ ಹೆಚ್ಚು ಹಿಂದುಳಿದ ತಾಲ್ಲೂಕುಗಳು | ಹೆಚ್ಚು ಹಿಂದುಳಿದ ತಾಲ್ಲೂಕುಗಳು | ಹಿಂದುಳಿದ ತಾಲ್ಲೂಕುಗಳು | ಕೈಗಾರಿಕೆಯಲ್ಲಿ ಅಭಿವೃದ್ಧಿಯಾದ ತಾಲ್ಲೂಕುಗಳು |
| 1 | ಬೆಂಗಳೂರು (ನಗರ) | 4 | | | | ಆನೇಕಲ್<br>ಬೆಂಗಳೂರು (ಉತ್ತರ)<br>ಬೆಂಗಳೂರು (ದಕ್ಷಿಣ)<br>ಬೆಂಗಳೂರು (ಪೂರ್ವ) |
| 2 | ಬೆಂಗಳೂರು (ಗ್ರಾಮಾಂತರ) | 8 | ಕನಕಪುರ<br>ಮಾಗಡಿ | | | ಚನ್ನಪಟ್ಟಣ<br>ದೇವನಹಳ್ಳಿ<br>ದೊಡ್ಡಬಳ್ಳಾಪುರ<br>ಹೊಸಕೋಟೆ<br>ನೆಲಮಂಗಲ<br>ರಾಮನಗರ |
| 3 | ಚಿತ್ರದುರ್ಗ | 6 | ಹೊಸದುರ್ಗ | ಹಿರಿಯೂರು<br>ಮೊಳಕಾಲ್ಮೂರು<br>ಹೊಳಲ್ಕೆರೆ<br>ಚಳ್ಳಕೆರೆ | ಚಿತ್ರದುರ್ಗ | |
| 4 | ದಾವಣಗೆರೆ | 6 | ಚನ್ನಗಿರಿ<br>ಹರಪನಹಳ್ಳಿ | ಹೊನ್ನಾಳಿ<br>ಜಗಳೂರು | ದಾವಣಗೆರೆ<br>ಹರಿಹರ | |
| 5 | ಕೋಲಾರ | 1 | ಬಾಗೇಪಲ್ಲಿ | ಮುಳಬಾಗಿಲು<br>ಗುಡಿಬಂಡೆ<br>ಗೌರಿಬಿದನೂರು | ಕೋಲಾರ<br>ಚಿಕ್ಕಬಳ್ಳಾಪುರ<br>ಶಿಡ್ಲಘಟ್ಟ<br>ಮಾಲೂರು<br>ಬಂಗಾರಪೇಟೆ<br>ಚಿಂತಾಮಣಿ<br>ಶ್ರೀನಿವಾಸಪುರ | |

| ಕ್ರ ಸಂ. | ಜಿಲ್ಲೆ | ಒಟ್ಟು ತಾಲ್ಲೂಕು-ಗಳ ಸಂಖ್ಯೆ | ವಲಯ - 1 | | ವಲಯ - 2 | ವಲಯ - 3 |
|---|---|---|---|---|---|---|
| | | | ಅತೀ ಹೆಚ್ಚು ಹಿಂದುಳಿದ ತಾಲ್ಲೂಕುಗಳು | ಹೆಚ್ಚು ಹಿಂದುಳಿದ ತಾಲ್ಲೂಕುಗಳು | ಹಿಂದುಳಿದ ತಾಲ್ಲೂಕುಗಳು | ಕೈಗಾರಿಕೆಯಲ್ಲಿ ಅಭಿವೃದ್ಧಿಯಾದ ತಾಲ್ಲೂಕುಗಳು |
| 6 | ಶಿವಮೊಗ್ಗ | 7 | - | ಸೊರಬ | ಶಿವಮೊಗ್ಗ<br>ಭದ್ರಾವತಿ<br>ಸಾಗರ<br>ಶಿಕಾರಿಪುರ<br>ಹೊಸನಗರ<br>ತೀರ್ಥಹಳ್ಳಿ | |
| 7 | ತುಮಕೂರು | 10 | ಕುಣಿಗಲ್<br>ಮಧುಗಿರಿ<br>ಗುಬ್ಬಿ<br>ಸಿರಾ<br>ಪಾವಗಡ | ತುರುವೇಕೆರೆ<br>ಕೊರಟಗೆರೆ<br>ಚಿಕ್ಕನಾಯಕನಹಳ್ಳಿ | ತುಮಕೂರು<br>ತಿಪಟೂರು | |
| 8 | ಚಾಮರಾಜನಗರ | 4 | ಚಾಮರಾಜನಗರ | ಗುಂಡ್ಲುಪೇಟೆ<br>ಕೊಳ್ಳೇಗಾಲ | ಯಳಂದೂರು | |
| 9 | ಚಿಕ್ಕಮಗಳೂರು | 7 | - | ಕಡೂರು | ಚಿಕ್ಕಮಗಳೂರು<br>ತರಿಕೆರೆ<br>ಶೃಂಗೇರಿ<br>ಮೂಡಿಗೆರೆ<br>ಕೊಪ್ಪ<br>ನರಸಿಂಹರಾಜಪುರ | |
| 10 | ದಕ್ಷಿಣ ಕನ್ನಡ | 5 | - | - | ಬಂಟ್ವಾಳ<br>ಪುತ್ತೂರು<br>ಸುಳ್ಯ<br>ಬೆಳ್ತಂಗಡಿ | ಮಂಗಳೂರು |
| 11. | ಹಾಸನ | 8 | - | ಅರಕಲಗೂಡು | ಹಾಸನ<br>ಅರಸೀಕೆರೆ<br>ಚನ್ನರಾಯಪಟ್ಟಣ<br>ಹೊಳೇನರಸೀಪುರ<br>ಬೇಲೂರು<br>ಆಲೂರು<br>ಸಕಲೇಶಪುರ | |

| ಕ್ರ ಸಂ. | ಜಿಲ್ಲೆ | ಒಟ್ಟು ತಾಲ್ಲೂಕು-ಗಳ ಸಂಖ್ಯೆ | ವಲಯ - 1 | | ವಲಯ - 2 | ವಲಯ - 3 |
|---|---|---|---|---|---|---|
| | | | ಅತೀ ಹೆಚ್ಚು ಹಿಂದುಳಿದ ತಾಲ್ಲೂಕುಗಳು | ಹೆಚ್ಚು ಹಿಂದುಳಿದ ತಾಲ್ಲೂಕುಗಳು | ಹಿಂದುಳಿದ ತಾಲ್ಲೂಕುಗಳು | ಕೈಗಾರಿಕೆಯಲ್ಲಿ ಅಭಿವೃದ್ಧಿಯಾದ ತಾಲ್ಲೂಕುಗಳು |
| 12. | ಕೊಡಗು | 3 | - | - | ಮಡಿಕೇರಿ<br>ಸೋಮವಾರಪೇಟೆ<br>ವಿರಾಜಪೇಟೆ | |
| 13. | ಮಂಡ್ಯ | 7 | - | ಮಳವಳ್ಳಿ<br>ನಾಗಮಂಗಲ<br>ಕೆ.ಆರ್. ಪೇಟೆ | ಮಂಡ್ಯ<br>ಮದ್ದೂರು<br>ಶ್ರೀರಂಗಪಟ್ಟಣ<br>ಪಾಂಡವಪುರ | |
| 14. | ಮೈಸೂರು | 7 | ಹೆಗ್ಗಡದೇವನ ಕೋಟೆ | ಹುಣಸೂರ್<br>ಟಿ.ಎನ್. ಪುರ<br>ನಂಜನಗೂಡು | ಪಿರಿಯಾಪಟ್ಟಣ<br>ಕೆ.ಆರ್. ನಗರ | ಮೈಸೂರು |
| 15. | ಉಡುಪಿ | 3 | - | - | ಉಡುಪಿ<br>ಕುಂದಾಪುರ<br>ಕಾರ್ಕಳ | |
| 16. | ಬಳ್ಳಾರಿ | 7 | ಸಂಡೂರು<br>ಕೂಡ್ಲಿಗಿ | ಶಿರಗುಪ್ಪ<br>ಹೆಚ್.ಬಿ.ಹಳ್ಳಿ<br>ಹೆಚ್. ಹಡಗಲಿ | ಬಳ್ಳಾರಿ<br>ಹೊಸಪೇಟೆ | |
| 17. | ಬೀದರ್ | 5 | ಭಾಲ್ಕಿ<br>ಹುಮ್ನಾಬಾದ್<br>ಬಸವಕಲ್ಯಾಣ<br>ಔರಾದ್ | - | ಬೀದರ್ | |
| 18. | ಗುಲ್ಬರ್ಗ | 10 | ಸೇಡಂ<br>ಶೋರಾಪುರ<br>ಯಾದ್‌ಗಿರ್<br>ಚಿತಾಪುರ್<br>ಅಫ್‌ಜಲ್‌ಪುರ<br>ಶಹಪುರ<br>ಆಲಂದ್<br>ಚಿಂಚೋಳಿ<br>ಜೇವರ್ಗಿ | - | ಗುಲ್ಬರ್ಗ | |

| ಕ್ರ ಸಂ. | ಜಿಲ್ಲೆ | ಒಟ್ಟು ತಾಲ್ಲೂಕು-ಗಳ ಸಂಖ್ಯೆ | ವಲಯ - 1 | | ವಲಯ - 2 | ವಲಯ - 3 |
|---|---|---|---|---|---|---|
| | | | ಅತೀ ಹೆಚ್ಚು ಹಿಂದುಳಿದ ತಾಲ್ಲೂಕುಗಳು | ಹೆಚ್ಚು ಹಿಂದುಳಿದ ತಾಲ್ಲೂಕುಗಳು | ಹಿಂದುಳಿದ ತಾಲ್ಲೂಕುಗಳು | ಕೈಗಾರಿಕೆಯಲ್ಲಿ ಅಭಿವೃದ್ಧಿಯಾದ ತಾಲ್ಲೂಕುಗಳು |
| 19. | ಕೊಪ್ಪಳ | 4 | ಕುಷ್ಟಗಿ<br>ಯಲಬುರ್ಗ | ಕೊಪ್ಪಳ | ಗಂಗಾವತಿ | |
| 20. | ರಾಯಚೂರು | 5 | ಸಿಂಧನೂರು<br>ಮಾನ್ವಿ<br>ಲಿಂಗಸುಗೂರು<br>ದೇವದುರ್ಗ | ರಾಯಚೂರು | | |
| 21. | ಬಾಗಲಕೋಟೆ | 6 | ಬೀಳಗಿ | ಹುನಗುಂದ<br>ಬಾದಾಮಿ | ಬಾಗಲಕೋಟೆ<br>ಮುಧೋಳ್<br>ಜಮಖಂಡಿ | |
| 22. | ಬೆಳಗಾವಿ | 10 | - | ಅಥಣಿ<br>ಗೋಕಾಕ್<br>ಸೌಂದತ್ತಿ | ಬೆಳಗಾವಿ<br>ಖಾನಾಪುರ<br>ಹುಕ್ಕೇರಿ<br>ರಾಮದುರ್ಗ<br>ಬೈಲಹೊಂಗಲ<br>ಚಿಕ್ಕೋಡಿ<br>ರಾಯಭಾಗ್ | |
| 23. | ಬಿಜಾಪುರ | 5 | ಮುದ್ದೇಬಿಹಾಳ್<br>ಬಿ.ಬಾಗೇವಾಡಿ<br>ಇಂಡಿ<br>ಸಿಂದಗಿ | - | ಬಿಜಾಪುರ | |
| 24. | ಧಾರವಾಡ | 5 | - | ಕಲಘಟಗಿ | ಧಾರವಾಡ<br>ಹುಬ್ಬಳ್ಳಿ<br>ಕುಂದಗೋಳ್<br>ನವಲಗುಂದ | |
| 25. | ಗದಗ | 5 | - | ಮುಂಡರಗಿ | ಗದಗ<br>ನರಗುಂದ<br>ರೋಣ<br>ಶಿರಹಟ್ಟಿ | |

| ಕ್ರ ಸಂ. | ಜಿಲ್ಲೆ | ಒಟ್ಟು ತಾಲ್ಲೂಕು-ಗಳ ಸಂಖ್ಯೆ | ವಲಯ - 1 | | ವಲಯ - 2 | ವಲಯ - 3 |
|---|---|---|---|---|---|---|
| | | | ಅತೀ ಹೆಚ್ಚು ಹಿಂದುಳಿದ ತಾಲ್ಲೂಕುಗಳು | ಹೆಚ್ಚು ಹಿಂದುಳಿದ ತಾಲ್ಲೂಕುಗಳು | ಹಿಂದುಳಿದ ತಾಲ್ಲೂಕುಗಳು | ಕೈಗಾರಿಕೆಯಲ್ಲಿ ಅಭಿವೃದ್ಧಿಯಾದ ತಾಲ್ಲೂಕುಗಳು |
| 26. | ಹಾವೇರಿ | 7 | - | ಸವಣೂರು<br>ಶಿಗ್ಗಾಂವ್<br>ಹಿರೇಕೆರೂರು | ಹಾವೇರಿ<br>ರಾಣಿಬೆನ್ನೂರು<br>ಬ್ಯಾಡಗಿ<br>ಹಾನಗಲ್ | |
| 27. | ಉತ್ತರ ಕನ್ನಡ | 1 | - | ಸೂಪ<br>ಭಟ್ಕಳ | ಕಾರವಾರ<br>ಹಳಿಯಾಳ<br>ಸಿರಸಿ<br>ಮುಂಡಗೋಡ್<br>ಯಲ್ಲಾಪುರ<br>ಹೊನ್ನಾವರ<br>ಅಂಕೋಲ<br>ಸಿದ್ದಾಪುರ<br>ಕುಮಟಾ | |
| | ಒಟ್ಟು | 176 | 39 | 40 | 85 | 12 |

ಅನುಬಂಧ -‘ಸಿ’

## ಮೆಗಾ, ಬೃಹತ್ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳಿಗೆ ನೀಡಲಾಗುವ ಉತ್ತೇಜನಗಳು

| ಕ್ರ ಸಂ. | ಉತ್ತೇಜನದ ರೀತಿ | ಮೆಗಾ ಕೈಗಾರಿಕೆಗಳು | ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು | ಸಣ್ಣ ಕೈಗಾರಿಕೆಗಳು |
|---|---|---|---|---|
| 1 | ಬಂಡವಾಳ ಹೂಡಿಕೆ ಸಹಾಯ ಧನ | ಲಭ್ಯವಿಲ್ಲ | ಲಭ್ಯವಿಲ್ಲ | **ವಲಯ-1** : ಸ್ಥಿರಾಸ್ಥಿ ಮೌಲ್ಯದ ಶೇ. 25 – ಗರಿಷ್ಠ ಮಿತಿ ಪ್ರತಿ ಘಟಕಕ್ಕೆ ರೂ. 15 ಲಕ್ಷಗಳು<br>**ವಲಯ-2** : ಸ್ಥಿರಾಸ್ಥಿ ಮೌಲ್ಯದ ಶೇ.20 ರಷ್ಟು– ಗರಿಷ್ಠ ಮಿತಿ ಪ್ರತಿ ಘಟಕಕ್ಕೆ ರೂ. 10 ಲಕ್ಷಗಳು. |
| | | | | **ವಲಯ-1 ಮತ್ತು 2**<br>ಪರಿಶಿಷ್ಟ ಜಾತಿ / ಪಂಗಡ / ಅಂಗವಿಕಲರು / ಅಲ್ಪಸಂಖ್ಯಾತರು/ ಮಾಜಿ ಯೋಧರು – ಈ ವರ್ಗಕ್ಕೆ ಸೇರಿದ ಉದ್ಯಮಶೀಲರಿಗೆ ಸ್ಥಿರಾಸ್ಥಿ ಮೌಲ್ಯದ ಶೇ.5 ರಷ್ಟು ಹೆಚ್ಚುವರಿ ಸಹಾಯಧನ – ಗರಿಷ್ಠ ಮಿತಿ ಪ್ರತಿ ಘಟಕಕ್ಕೆ ರೂ. 1 ಲಕ್ಷ. ಮಹಿಳಾ ಉದ್ಯಮಶೀಲರಿಗೆ ಗರಿಷ್ಠ ಮಿತಿ ಪ್ರತಿ ಘಟಕಕ್ಕೆ ರೂ. 5 ಲಕ್ಷಗಳು.<br>**ಸೂಚನೆ** : ಈ ಉತ್ತೇಜನವು ಕೆ.ಎಸ್.ಎಫ್.ಸಿ/ಕೆ.ಎಸ್.ಐ.ಐ.ಡಿ.ಸಿ/ ಬ್ಯಾಂಕ್‌ಗಳು/ ಇತರ ಹಣಕಾಸು ಸಂಸ್ಥೆಗಳು ನೆರವು ನೀಡಿದ ಘಟಕಗಳಿಗೆ ಮಾತ್ರ ಲಭ್ಯವಿದೆ.<br>**ವಲಯ 3** : ಲಭ್ಯವಿಲ್ಲ. |
| 2 | ಕ್ಯಾಪ್ಟಿವ್ ಪವರ್ ಜನರೇಶನ್ ಮೇಲೆ ಎಲ್‌ಕ್ಟ್ರಿಸಿಟಿ ಡ್ಯುಟಿಯ ವಿನಾಯಿತಿ | ಪ್ರಸ್ತುತ ಇಂಧನ ಇಲಾಖೆಯ ನೀತಿಯಲ್ಲಿ ಲಭ್ಯವಿರುವ ಸೌಲಭ್ಯವನ್ನು 2011 ರವರೆಗೆ ಮುಂದುವರಿಸಲಾಗುವುದು. | | |
| 3 | ಸ್ಟ್ಯಾಂಪ್ ಡ್ಯೂಟಿಯಲ್ಲಿ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ಕಡಿತ | ವಲಯ : 1 – ಪೂರ್ತಿ ವಿನಾಯಿತಿ.<br>ವಲಯ : 2 – ಶೇ. 75 ರಷ್ಟು ವಿನಾಯಿತಿ.<br>ವಲಯ : 3 – ಲಭ್ಯವಿಲ್ಲ. | | |
| | | ಸ್ಟ್ಯಾಂಪ್ ಡ್ಯೂಟಿ : ಹಣಕಾಸು ಸಂಸ್ಥೆಗಳು / ಬ್ಯಾಂಕ್ ಗಳಿಂದ ಅವಧಿ ಸಾಲವನ್ನು ಪಡೆಯುವ ಸಂದರ್ಭದಲ್ಲಿ ಸಲ್ಲಿಸಲಾಗುವ ಲೋನ್ ಮತ್ತು ಕ್ರೆಡಿಟ್ ಡೀಡ್ ಗಳಿಗೆ ಹಾಗೂ ಕೈಗಾರಿಕಾ ಭೂಮಿ/ನಿವೇಶನದ ವಿತರಣೆ ಸಂದರ್ಭದಲ್ಲಿ ಕೆ.ಐ.ಎ.ಡಿ.ಬಿ / ಕೆ.ಎಸ್.ಎಸ್.ಐ.ಡಿ.ಸಿ ಗೆ ಸಲ್ಲಿಸಲಾಗುವ ಲೀಸ್, ಲೀಸ್–ಕಂ–ಸೇಲ್ ಮತ್ತು ಶುದ್ಧ ಕ್ರಯ ಪತ್ರದ ಸಂದರ್ಭದಲ್ಲಿ.<br>ನೋಂದಣಿ ಶುಲ್ಕದಲ್ಲಿ ಕಡಿತ : ರೂ. ಒಂದು ಸಾವಿರಕ್ಕೆ ಒಂದು ರೂಪಾಯಿಯಂತೆ ರಿಯಾಯಿತಿ ನೋಂದಣಿ ಶುಲ್ಕ. | | |

| ಕ್ರ ಸಂ | ಉತ್ತೇಜನದ ರೀತಿ | ಮೆಗಾ ಕೈಗಾರಿಕೆಗಳು | ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು | ಸಣ್ಣ ಕೈಗಾರಿಕೆಗಳು |
|---|---|---|---|---|
| 4 | ಪರಿವರ್ತನಾ ಶುಲ್ಕದ ಮನ್ನಾ (ಕೈಗಾರಿಕಾ ಬಳಕೆಗಾಗಿ ಪರಿವರ್ತನೆಯಾಗುವ ಭೂಮಿ ಮೇಲೆ) | ವಲಯ : 1 – ಪೂರ್ತಿ ವಿನಾಯಿತಿ– ಗರಿಷ್ಠ ಮಿತಿ ಪ್ರತಿ ಘಟಕಕ್ಕೆ 50 ಎಕರೆ.<br>ವಲಯ : 2 – ಶೇ. 75 ರಷ್ಟು ವಿನಾಯಿತಿ – ಗರಿಷ್ಠ ಮಿತಿ ಪ್ರತಿ ಘಟಕಕ್ಕೆ 25 ಎಕರೆ.<br>ವಲಯ : 3 – ಲಭ್ಯವಿಲ್ಲ | ವಲಯ : 1 – ಪೂರ್ತಿ ವಿನಾಯಿತಿ ಗರಿಷ್ಠ ಮಿತಿ ಪ್ರತಿ ಘಟಕಕ್ಕೆ 25 ಎಕರೆ.<br>ವಲಯ : 2 – ಶೇ. 75 ರಷ್ಟು ವಿನಾಯಿತಿ – ಗರಿಷ್ಠ ಮಿತಿ ಪ್ರತಿ ಘಟಕಕ್ಕೆ 25 ಎಕರೆ.<br>ವಲಯ : 3 – ಲಭ್ಯವಿಲ್ಲ | ವಲಯ : 1 – ಪೂರ್ತಿ ವಿನಾಯಿತಿ – ಗರಿಷ್ಠ ಮಿತಿ ಪ್ರತಿ ಘಟಕಕ್ಕೆ 10 ಎಕರೆ.<br>ವಲಯ : 2 – ಶೇ. 75 ರಷ್ಟು ವಿನಾಯಿತಿ – ಗರಿಷ್ಠ ಮಿತಿ ಪ್ರತಿ ಘಟಕಕ್ಕೆ 10 ಎಕರೆ.<br>ವಲಯ : 3 – ಲಭ್ಯವಿಲ್ಲ |
| 5 | ಕೆ.ಐ.ಎ.ಡಿ.ಬಿ ಮೂಲಕ ಭೂಮಿಯ ಸ್ವಾಧೀನ ಮತ್ತು ವಿತರಣೆ | ಕೈಗಾರಿಕಾ ಪ್ರದೇಶದ / ವಸಾಹತಿನ ಅಥವಾ ಸಿಂಗಲ್ ಯುನಿಟ್ ಕಾಂಪ್ಲೆಕ್ಸ್ ನ ಅಭಿವೃದ್ಧಿಗಾಗಿ ಭೂಮಿಯನ್ನು ಸ್ವಾಧೀನ ಪಡಿಸುವ ಸಂದರ್ಭದಲ್ಲಿ ವಲಯ–3 ರ ಪ್ರದೇಶಗಳಿಗೆ ಶೇ. 28 ರಂತೆ ಕೆ.ಐ.ಎ.ಡಿ.ಬಿ ಸ್ವಾಧೀನ ಶುಲ್ಕವನ್ನು ವಿಧಿಸಲಾಗುವುದು.<br>ವಲಯ – 1 ಮತ್ತು 2 ರ ಪ್ರದೇಶಗಳಿಗೆ ಸ್ವಾಧೀನ ಶುಲ್ಕವು ಶೇ. 10 ರಷ್ಟು ಇರುವುದು. | | |
| 6 | ತ್ಯಾಜ್ಯ ವಸ್ತುಗಳ ಸಂಸ್ಕರಣಾ ಸ್ಥಾವರಗಳ (ಇ.ಟಿ.ಪಿ) ಸ್ಥಾಪನೆಗೆ ಸಹಾಯ ಧನ | ಎಲ್ಲಾ ವಲಯಗಳಲ್ಲಿ ಎಲ್ಲಾ ವರ್ಗದ ಕೈಗಾರಿಕೆಗಳಿಗೆ ಇ.ಟಿ.ಪಿ ಯ ವೆಚ್ಚದ ಶೇ. 50 ರಷ್ಟನ್ನು ಒನ್ ಟೈಮ್ ಕ್ಯಾಪಿಟಲ್ ಸಹಾಯಧನವಾಗಿ ನೀಡಲಾಗುವುದು. ಗರಿಷ್ಠ ಮಿತಿ ಪ್ರತಿ ಘಟಕ್ಕೆ ರೂ. 100 ಲಕ್ಷಗಳು. | | |
| 7 | ಪ್ರವೇಶ ತೆರಿಗೆ ಮತ್ತು ವಿಶೇಷ ಪ್ರವೇಶ ತೆರಿಗೆಯಲ್ಲಿ ವಿನಾಯಿತಿ | ವಲಯ 1 ಮತ್ತು 2 : (ಅ) ಯೋಜನೆಯ ಅನುಷ್ಠಾನ ಆರಂಭವಾದ ದಿನಾಂಕದಿಂದ ಪ್ರಾರಂಭಿಕ ಮೂರು ವರ್ಷಗಳ ಅವಧಿಗೆ ಪ್ಲಾಂಟ್ ಮತ್ತು ಮೆಷಿನರಿ ಹಾಗೂ ಕ್ಯಾಪಿಟಲ್ ಗೂಡ್ಸ್ ಗೆ ಪ್ರವೇಶ ತೆರಿಗೆ ಮತ್ತು ವಿಶೇಷ ಪ್ರವೇಶ ತೆರಿಗೆಯಿಂದ ವಿನಾಯಿತಿ.<br>ಈ ಉದ್ದೇಶಕ್ಕಾಗಿ ಪ್ಲಾಂಟ್ ಮತ್ತು ಮೆಷಿನರಿ ಹಾಗೂ ಕ್ಯಾಪಿಟಲ್ ಗೂಡ್ಸ್ ಪದವು ಕ್ಯಾಪ್ಟಿವ್ ಎಲ್‌ಕ್ಟ್ರಿಸಿಟಿ ಉತ್ಪಾದನೆಯ ವಿದ್ಯುತ್ ಯೋಜನೆಗೆ ಅಳವಡಿಸುವ ಪ್ಲಾಂಟ್ ಮತ್ತು ಮೆಷಿನರಿ ಹಾಗೂ ಕ್ಯಾಪಿಟಲ್ ಗೂಡ್ಸ್ ಅಂದರೆ ಉಪಕರಣ ಇತ್ಯಾದಿಯನ್ನು ಒಳಗೊಂಡಿದೆ.<br>(ಆ) ಕಚ್ಚಾ ಪದಾರ್ಥಗಳಿಗೆ, ಇನ್‌ಪುಟ್ ಗಳಿಗೆ ಕಾಂಪೋನೆಂಟ್ ಭಾಗಗಳು ಮತ್ತು ಬಳಕೆಯಾಗುವ ವಸ್ತುಗಳಿಗೆ (ಪೆಟ್ರೋಲಿಯಂ ಉತ್ಪನ್ನಗಳನ್ನು ಹೊರತಾಗಿ) (ಎಲ್ಲಿ ಅನ್ವಯವಾಗುತ್ತದೋ ಅಲ್ಲಿ) ವಾಣಿಜ್ಯ ಉತ್ಪಾದನೆ ಆರಂಭವಾದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ.<br>ವಲಯ : 3 – ಲಭ್ಯವಿಲ್ಲ | | |
| 8 | ಮಾನವ ಸಂಪನ್ಮೂಲ ಅಭಿವೃದ್ಧಿ | (ಅ) ನಿರ್ದಿಷ್ಟ ಕ್ಷೇತ್ರದಲ್ಲಿ ತರಬೇತಿಗಾಗಿ ತರಬೇತಿ ಕೇಂದ್ರವನ್ನು ಸ್ಥಾಪಿಸಲು ಐದು ಎಕರೆ ವರೆಗೆ ಸರಕಾರಿ ಜಮೀನನ್ನು ಅನುದಾನವಾಗಿ ನೀಡಲು ಪರಿಗಣಿಸಬಹುದು. ಇದರ ಜೊತೆಗೆ ಯೋಜನಾ ವೆಚ್ಚದ ಶೇ. 50 ರಷ್ಟನ್ನು – ಪ್ರತೀ ಕೇಂದ್ರಕ್ಕೆ ರೂ. 2 ಕೋಟಿಗಳನ್ನು ಸೀಮಿತಗೊಳಿಸಿ, ಕ್ಯಾಪಿಟಲ್ ವಂತಿಗೆಯಾಗಿ ನೀಡಲಾಗುವುದು.<br>(ಆ) ತರಬೇತಿ ಸಂಸ್ಥೆಗಳನ್ನು ನಡೆಸಲು ತಗಲುವ ಆವರ್ತನಾ ವೆಚ್ಚಕ್ಕಾಗಿ ಪ್ರತಿಯೊಬ್ಬ ಅಭ್ಯರ್ಥಿಗೆ ತಿಂಗಳಿಗೆ ರೂ.750 ರಂತೆ, ನೀಡಲಾಗುವುದು. ಗರಿಷ್ಠ ಮಿತಿ : ವರ್ಷಕ್ಕೆ ರೂ.15 ಲಕ್ಷಗಳು, ಮೂರು ವರ್ಷಗಳ ಅವಧಿಗೆ. | | |

| ಕ್ರ ಸಂ | ಉತ್ತೇಜನದ ರೀತಿ | ಮೆಗಾ ಕೈಗಾರಿಕೆಗಳು | ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು | ಸಣ್ಣ ಕೈಗಾರಿಕೆಗಳು |
|---|---|---|---|---|
| | | (ಇ) ನಿರುದ್ಯೋಗಿ ವಿದ್ಯಾವಂತ ಯುವಜನರಿಗೆ ವೃತ್ತಿ ಪರ ತರಬೇತಿಯನ್ನು ವಿವಿಧ ವೃತ್ತಿಯಲ್ಲಿ ಕೈಗಾರಿಕೆ/ಸೇವಾ ಘಟಕಗಳ ಮೂಲಕ ನೀಡಲು ಸರ್ಕಾರವು ನೂತನ ಯೋಜನೆಯೊಂದನ್ನು ಜಾರಿಗೊಳಿಸಲಿದೆ. ಇದರ ಪ್ರಕಾರ ಪ್ರತಿ ವಿದ್ಯಾರ್ಥಿಗೆ, ತಿಂಗಳಿಗೆ ರೂ.750ರಂತೆ, ವಿದ್ಯಾರ್ಥಿ ವೇತನವನ್ನು ತರಬೇತಿ ಸಂಸ್ಥೆಗಳ ಸೂಕ್ತ ಹೊಂದಾಣಿಕೆಯೊಂದಿಗೆ ನೀಡಲಾಗುವುದು. | | |
| 9 | ತಾಂತ್ರಿಕ ಉನ್ನತೀಕರಣ | ಲಭ್ಯವಿಲ್ಲ | ಲಭ್ಯವಿಲ್ಲ | ವಲಯ 1 ಮತ್ತು 2:<br>(ಅ) ಪ್ರಸ್ತುತ ಜಾರಿಯಲ್ಲಿರುವ ಕೆ.ಎಸ್.ಎಫ್.ಸಿ./ಕೆ.ಎಸ್.ಐ.ಐ.ಡಿ.ಸಿ. ಇಂದ ತಾಂತ್ರಿಕ ಉನ್ನತೀಕರಣ ಸಾಲವನ್ನು ಪಡೆದಾಗ ಲಭ್ಯವಿರುವ ಶೇ.4 ಬಡ್ಡಿ ಸಹಾಯಧನ ಯೋಜನೆಯನ್ನು ಭಾರತ ಸರ್ಕಾರದ ಸಿ.ಎಲ್.ಸಿ.ಎಸ್. ಯೋಜನೆಯಲ್ಲಿ ಅರ್ಹವಾಗದ ಸಂಧರ್ಭದಲ್ಲಿ, ಶೆಡ್ಯೂಲ್ಡ್ ಕಮರ್ಷಿಯಲ್ ಬ್ಯಾಂಕುಗಳು ನೀಡುವ ತಾಂತ್ರಿಕ ಉನ್ನತೀಕರಣ ಸಾಲಗಳಿಗೂ ವಿಸ್ತರಿಸಲಾಗುವುದು.<br>ವಲಯ 1, 2 ಮತ್ತು 3:<br>(ಅ) ಪ್ರಸ್ತುತ ಜಾರಿಯಲ್ಲಿರುವ ಬಿ.ಐ.ಎಸ್. ಪ್ರಾಡಕ್ಟ್ ಸರ್ಟಿಫಿಕೇಷನ್ ಅಥವಾ ಐ.ಎಸ್.ಓ. ಸೀರೀಸ್ ಸರ್ಟಿಫಿಕೇಷನ್ ಪಡೆಯುವ ಸಣ್ಣ ಕೈಗಾರಿಕೆಗಳಿಗೆ ಲಭ್ಯವಿರುವ ಉತ್ತೇಜನವನ್ನು ಹೆಚ್ಚಿನ ಆರ್ಥಿಕ ಪೂರೈಕೆಯೊಂದಿಗೆ ಮುಂದುವರಿಸಲಾಗುವುದು.<br>(ಇ) ಪೇಟೆಂಟ್ ನೊಂದಣಿಗೆ ಉತ್ತೇಜನ: ಪೇಟೆಂಟ್ ನೊಂದಣಿಯ ವೆಚ್ಚದ ಶೇ.50 ರಷ್ಟು ಸಹಾಯ ಧನ–ಗರಿಷ್ಟ ಮಿತಿ ಪ್ರತಿ ಘಟಕಕ್ಕೆ ರೂ. 2 ಲಕ್ಷ. |
| | | ಐ.ಐ.ಟಿ.ಗಳು, ವಿಶ್ವವಿದ್ಯಾಲಯಗಳು ಮತ್ತು ಇತರ ಪ್ರತಿಷ್ಠಿತ ಸಂಸ್ಥೆಗಳ ಸಹಯೋಗದೊಂದಿಗೆ ಕೈಗೊಳ್ಳುವ ನಿರ್ದಿಷ್ಟ ವ್ಯವಹಾರ ಸಾಧ್ಯತೆಯ ಸಂಶೋಧನಾ ಯೋಜನೆಗಳಿಗೆ ಹಣಕಾಸು ನೀಡಲಾಗುವುದು. ಈ ನೀತಿಯ ಅವಧಿಯಲ್ಲಿ ಇಂತಹ ಉದ್ದೇಶಕ್ಕಾಗಿ ರೂ.25 ಕೋಟಿಗಳನ್ನು ಮೀಸಲಿಡಲಾಗುವುದು. | | |

| ಕ್ರ ಸಂ. | ಉತ್ತೇಜನದ ರೀತಿ | ಮೆಗಾ ಕೈಗಾರಿಕೆಗಳು | ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು | ಸಣ್ಣ ಕೈಗಾರಿಕೆಗಳು |
|---|---|---|---|---|
| 10. | ಅಧಿಸೂಚಿತ ಕೈಗಾರಿಕಾ ಸಮೂಹಗಳಲ್ಲಿ ಕೈಗಾರಿಕಾ ಮೂಲಭೂತ ಸೌಕರ್ಯ ಅಭಿವೃದ್ಧಿ / ಸಾಮಾನ್ಯ ಸೌಕರ್ಯಗಳು/ಸವಲತ್ತುಗಳು. | ಈಗಿರುವ ಕೈಗಾರಿಕಾ ಪ್ರದೇಶ/ವಸಾಹತುಗಳ ಮೂಲಭೂತ ಸವಲತ್ತುಗಳ ಉನ್ನತೀಕರಣ ಮತ್ತು ವ್ಯವಸ್ಥೆಗಾಗಿ ರೂ.500 ಕೋಟಿಗಳ ಪ್ರತ್ಯೇಕ ಮೂಲಭೂತ ಉನ್ನತೀಕರಣ ನಿಧಿಯನ್ನು ರಚಿಸಲಾಗುವುದು. ಈ ನಿಧಿಯನ್ನು ಹೊಸ ಕೈಗಾರಿಕಾ ಪ್ರದೇಶಗಳಿಗೂ ಬಳಸಬಹುದು. ಈ ನಿಧಿಯ ಬಳಕೆಯ ವಿಚಾರದಲ್ಲಿ ಪ್ರತ್ಯೇಕ ಮಾರ್ಗಸೂಚಿಯನ್ನು ನೀಡಲಾಗುವುದು. | | |
| 11. | ಕೃಷಿ ಉತ್ಪನ್ನಗಳನ್ನು ಸಂಸ್ಕರಿಸುವ ಕೈಗಾರಿಕೆಗಳು–ಎ.ಪಿ.ಎಂ.ಸಿ. ಸೆಸ್ ನಿಂದ ವಿನಾಯಿತಿ. | ಸಂಸ್ಕರಣ ಕೈಗಾರಿಕೆಗಳು ಕೃಷಿ ಉತ್ಪನ್ನಗಳನ್ನು ರೈತರಿಂದ ನೇರವಾಗಿ ಖರೀದಿಸುವ ಸಂದರ್ಭದಲ್ಲಿ ಎ.ಪಿ.ಎಂ.ಸಿ ಸೆಸ್ ನಿಂದ ವಿನಾಯಿತಿ ನೀಡಲಾಗುವುದು. | | |

ಅನುಬಂಧ - 'ಡಿ'

## ಉತ್ತೇಜನ ಮತ್ತು ರಿಯಾಯಿತಿಗಳಿಗೆ ಅನರ್ಹವಾಗಿರುವ ಕೈಗಾರಿಕಾ ಚಟುವಟಿಕೆಗಳ ಪಟ್ಟಿ

| | |
|---|---|
| 1 | ಮದ್ಯ ತಯಾರಿಸುವ ಹಾಗೂ ಭಟ್ಟಿ ಇಳಿಸುವ ಎಲ್ಲಾ ವಿವಿಧ ಘಟಕಗಳು |
| 2 | ಕಾಕಂಬಿ: ರೆಕ್ಟಿಫೈಡ್ ಸ್ಪಿರಿಟ್: ಡಿನೇಚರ್ಡ್ ಸ್ಪಿರಿಟನ್ನು ಪ್ರಧಾನ ಕಚ್ಚಾ ಮಾಲುಗಳನ್ನಾಗಿ ಉಪಯೋಗಿಸಿಕೊಂಡು ಪೋಟೆಬಲ್ ಆಲ್ಕೋಹಾಲ್‌ಗಳನ್ನು ಉತ್ಪಾದಿಸುವ ಘಟಕಗಳು. |
| 3 | ಖಂಡಸಾರಿ ಘಟಕಗಳು. |
| 4 | ಫೋಟೊ ಸ್ಟುಡಿಯೋಗಳು ಮತ್ತು ಕಲರ್ ಪ್ರೊಸೆಸಿಂಗ್ ಕೇಂದ್ರಗಳು. |
| 5 | ಫೋಟೊ ಕಾಪಿ ಮತ್ತು ಝೆರಾಕ್ಸ್ ಯಂತ್ರಗಳು. |
| 6 | ರಾಸಾಯನಿಕ ಗೊಬ್ಬರಗಳ ಮಿಶ್ರಣಗೊಳಿಸುವುದು. |
| 7. | ಡ್ರಗ್ಸ್: ಔಷಧ: ರಾಸಾಯನಿಕ ವಸ್ತುಗಳನ್ನು ಯಾವುದೇ ಸಂಸ್ಕರಣೆ ಮೌಲ್ಯವರ್ಧನೆ ಮಾಡದೆ ಮರು ಪ್ಯಾಕ್ ಮಾಡುವ ಘಟಕಗಳು. |
| 8 | ಎಲ್ಲಾ ವಿಧದ ಮರದ ಮಿಲ್ಲುಗಳು. |
| 9 | ಬೀಡಿಗಳು / ಸಿಗರೇಟ್ಸ್ / ಗುಟ್ಕಾ ಮತ್ತು ತಂಬಾಕು ಆಧರಿತ ಉತ್ಪನ್ನಗಳು. |
| 10. | ಆರ್ಗೋಣಿಯಿಕ್ / ರಿಯಾಕ್ಟಿವ್ ಡೈಸ್. |
| 11. | ಸುಡುಮದ್ದು / ಪಟಾಕಿಗಳು. |
| 12. | ಓಝೋನ್ ಡಿಪ್ಲಿಟಿಂಗ್ ಸಬ್‌ಸ್ಟೆನ್ಸ್ ಉತ್ಪಾದಿಸುವ ಅಥವಾ ಬಳಸುವ ಕೈಗಾರಿಕೆಗಳು. |
| 13. | ವಿದ್ಯುತ್ ಲಾಂಡ್ರಿಗಳು. |
| 14. | ಸಿಮೆಂಟ್ ಹಾಲೋ ಬ್ಲಾಕ್ಸ್, ವೈರ್ ಕಟ್ ಮತ್ತು ಫ್ಲೈ ಆಶ್ ಇಟ್ಟಿಗೆಗಳ ಹೊರತಾಗಿ ಇಟ್ಟಿಗೆ ತಯಾರಿಕಾ ಘಟಕಗಳು. |
| 15. | ಕೋಳಿ ಸಾಕಾಣಿಕೆ. |
| 16. | ಪಾಪ್‌ಕಾರ್ನ್, ಐಸ್‌ಕ್ರೀಮ್ ಮತ್ತು ಐಸ್‌ಕ್ಯಾಂಡಿ ಮಾಡುವ ಘಟಕಗಳು. |
| 17. | ಕಾಫಿ ಬೀಜ ಹುರಿಯುವುದು ಮತ್ತು ಪುಡಿ ಮಾಡುವುದು. |
| 18. | ಗಡಿಯಾರ ಮತ್ತು ಕೈಗಡಿಯಾರ ರಿಪೇರಿ ಅಂಗಡಿಗಳು. |
| 19. | ಕ್ಯಾಸೆಟ್ ಧ್ವನಿ ಮುದ್ರಣ (ಆಡಿಯೋ ಮತ್ತು ವೀಡಿಯೋ) |
| 20. | ಸಯನೈಡ್. |